ಅಧ್ಯಾಯ-೧೧

# ಇತರ ಇಲಾಖೆಗಳು

ಜಿಲ್ಲೆಯ ಆಡಳಿತ ವ್ಯಾಪ್ತಿಗೆ ಒಳಪಟ್ಟಂತೆ ಹಲವು ಇಲಾಖೆಗಳ ಕಾರ್ಯಚಟುವಟಿಕೆಗಳ ಬಗ್ಗೆ ಈಗಾಗಲೇ ಕೆಲವು ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ. ಜನ ಸಾಮಾನ್ಯರ ಕಲ್ಯಾಣವನ್ನು ಬಯಸುವ ಪ್ರಜಾಪ್ರಭುತ್ವ ಸರಕಾರವು ತನ್ನ ಪ್ರಗತಿಪರ ಯೋಜನೆಗಳನ್ನು ವಿವಿಧ ಇಲಾಖೆಗಳ ಮೂಲಕ ಅನುಷ್ಠಾನಗೊಳಿಸಲು ಯತ್ನಿಸುತ್ತದೆ. ಈ ಉದ್ದೇಶದಿಂದ ಜಿಲ್ಲಾಧಿಕಾರಿಗಳ ಕಛೇರಿಯನ್ನು ಹೊರತು ಪಡಿಸಿ ಜಿಲ್ಲೆಯಲ್ಲಿ ರಾಜ್ಯ ಸರಕಾರದ ಹಾಗೂ ಕೇಂದ್ರ ಸರಕಾರದ ವಿವಿಧ ಇಲಾಖೆಗಳ ಕಛೇರಿಗಳೂ, ಮಂಡಳಿಗಳೂ ಹಾಗೂ ನಿಗಮಗಳು ಕಾರ್ಯನಿರ್ವಹಿಸುತ್ತಿವೆ. ಇವು ಜನತೆಯ ಆಶೋತ್ತರಗಳಿಗೆ ಸ್ಪಂದಿಸಿ ಅವರ ಅಗತ್ಯಗಳಿಗನುಗುಣವಾಗಿ ತಮ್ಮ ಆಡಳಿತ ಯಂತ್ರವನ್ನು ಚಾಲನೆಗೊಳಿಸಿ ಸರಕಾರದ ವಿವಿಧ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುತ್ತವೆ. ಈ ಅಧ್ಯಾಯದಲ್ಲಿ ಇಂತಹ ಹಲವು ಕಛೇರಿಗಳೂ, ಮಂಡಳಿಗಳೂ ಹಾಗೂ ನಿಗಮಗಳ ಉದ್ದೇಶ, ಕಾರ್ಯಚಟುವಟಿಕೆ ಮತ್ತು ಅದರ ಆಡಳಿತ ವ್ಯವಸ್ಥೆಯ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

**ಅಗ್ನಿಶಾಮಕ ಇಲಾಖೆ**

ವಿಜಾಪುರದಲ್ಲಿ ಅಗ್ನಿಶಾಮಕ ಠಾಣೆಯು ೧೯೮೩ರಲ್ಲಿ ಆರಂಭವಾಯಿತು. ಇದಕ್ಕೆ ಪೂರ್ವದಲ್ಲಿ ನಗರ ಸಭೆಯವರೇ ಇದರ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಠಾಣಾಧಿಕಾರಿಗಳು ಇದರ ಮುಖ್ಯಸ್ಥರಾಗಿದ್ದು ಇವರ ನೆರವಿಗಾಗಿ ಒಬ್ಬ ಉಪಾಧಿಕಾರಿಗಳು, ಏಳು ಅಗ್ನಿಶಾಮಕ ಚಾಲಕರೂ ಹಾಗೂ ೩೦ ಅಗ್ನಿಶಾಮಕರೂ ಸಿಬ್ಬಂದಿ ವರ್ಗದಲ್ಲಿರುತ್ತಾರೆ. ಇವರ ಅಧೀನದಲ್ಲಿ ತಾಲೂಕು ಮಟ್ಟದಲ್ಲಿ ಮೂವರು ಉಪಾಧಿಕಾರಿಗಳು, ಬಾಗಲಕೋಟೆ (೧೯೯೧), ಜಮಖಂಡಿ (೧೯೯೩) ಮತ್ತು ಇಂಡಿ (೧೯೯೪) ಯಲ್ಲಿ ಕಾರ್ಯನಿರ್ವಹಿಸುತ್ತಿರುವರು. ಅಗ್ನಿ ನಿಯಂತ್ರಣ ಮತ್ತು ರಕ್ಷಣೆಗಾಗಿ ಹಾಗೂ ಶಾಲಾ ಕಾಲೇಜು ಮತ್ತಿತರ ಸಂಘ ಸಂಸ್ಥೆಗಳಲ್ಲಿ ಬೆಂಕಿ ಅನಾಹುತದ ಬಗ್ಗೆ ಹಾಗೂ ರಕ್ಷಿಸುವ ಬಗ್ಗೆ ತಿಳುವಳಿಕೆ ನೀಡುವುದು ಇದರ ಮುಖ್ಯ ಕಾರ್ಯಚಟುವಟಿಕೆಗಳಾಗಿವೆ. ಹುಬ್ಬಳ್ಳಿಯಲ್ಲಿರುವ ವಿಭಾಗೀಯ ಅಗ್ನಿಶಾಮಕ ಅಧಿಕಾರಿಗಳು ಇವರ ತಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

## ಅಬಕಾರಿ ಇಲಾಖೆ

ವಿಜಾಪುರದಲ್ಲಿ ಅಬಕಾರಿ ಇಲಾಖೆಯ ಕಛೇರಿಯು ೧೯೯೨ ರಲ್ಲಿ ಆರಂಭವಾಗಿದ್ದು ಆರಂಭದಲ್ಲಿ ಅಬಕಾರಿ ಅಧೀಕ್ಷಕರು ಕಛೇರಿಯ ಮುಖ್ಯಸ್ಥರಾಗಿದ್ದು ನಂತರದಲ್ಲಿ ಕಛೇರಿಯ ಮುಖ್ಯಸ್ಥರ ಹುದ್ದೆಯನ್ನು ಅಬಕಾರಿ ಉಪ ಆಯುಕ್ತರಾಗಿ ಬದಲಾವಣೆ ಮಾಡಲಾಯಿತು. ಅಬಕಾರಿ ಕಾಯ್ದೆ ೧೯೬೫ರ ಅನ್ವಯ ಡಿಸ್ಟಿಲರಿ ಶುಲ್ಕವನ್ನು ವಸೂಲು ಮಾಡಿ ಸರಕಾರಕ್ಕೆ ಭರಣಾ ಮಾಡುವುದು, ಸಾರಾಯಿ, ಐ.ಎಂ.ಎಲ್.ಬೀರ್, ಅನಧೀಕೃತ ಮದ್ಯ ಮಾರಾಟದ ಕಳ್ಳ ಸಾಗಾಣಿಕೆಗಳನ್ನು ತಡೆಗಟ್ಟುವುದು ಹಾಗೂ ಕಳ್ಳಭಟ್ಟಿ ಸಾರಾಯಿ ಮಾರಾಟದ ಕಳ್ಳ ಸಾಗಾಣಿಕೆಗಳನ್ನು ತಡೆಗಟ್ಟುವುದು ಈ ಕಛೇರಿಯ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ. ಅಬಕಾರಿ ಉಪ ಆಯುಕ್ತರ ನೆರವಿಗಾಗಿ ಇಬ್ಬರು ಅಬಕಾರಿ ಅಧೀಕ್ಷಕರು, ನಾಲ್ಕು ಅಬಕಾರಿ ಉಪ ಅಧೀಕ್ಷಕರು, ಹದಿನೈದು ಅಬಕಾರಿ ನಿರೀಕ್ಷಕರು ಮತ್ತಿತರ ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿರುವರು. ಬೆಳಗಾವಿಯಲ್ಲಿರುವ ಬೆಳಗಾವಿ ವಿಭಾಗದ ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ) ಹಾಗೂ ಬೆಂಗಳೂರಿನಲ್ಲಿರುವ ಅಬಕಾರಿ ಆಯುಕ್ತರು ಈ ಕಚೇರಿಯ ಮೇಲಾಧಿಕಾರಿಗಳಾಗಿರುತ್ತಾರೆ.

## ಅರಣ್ಯ ಇಲಾಖೆ

ವಿಜಾಪುರದಲ್ಲಿ ಸಾಮಾಜಿಕ ಅರಣ್ಯ ವಿಭಾಗ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯು ೧೯೮೩ರಲ್ಲಿ ಪ್ರಾರಂಭವಾಯಿತು. ಇದರ ವ್ಯಾಪ್ತಿಯು ಜಿಲ್ಲಾ ಮಟ್ಟದ್ದಾಗಿರುತ್ತದೆ. ರೈತರಿಗೆ ಸಸಿ ನೆಡಲು ಮತ್ತು ಅರಣ್ಯ ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸುವುದು. 'ಸಿ' ಮತ್ತು 'ಡಿ' ಜಮೀನುಗಳಲ್ಲಿ ಅರಣ್ಯೀಕರಣ ಹಾಗೂ ರಸ್ತೆ ಬದಿ ನೆಡು ತೋಪುಗಳನ್ನು ಬೆಳೆಸುವುದು ಇದರ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ. ಈ ಕಛೇರಿಯ ಅಧೀನದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯೂ ಮತ್ತು ವಲಯ ಅರಣ್ಯಾಧಿಕಾರಿಗಳ ಕಛೇರಿಯೂ ಕಾರ್ಯನಿರ್ವಹಿಸುತ್ತಿವೆ. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನೆರವಿಗಾಗಿ ಓರ್ವ ಅಧೀಕ್ಷಕರು, ನಾಲ್ಕು ಪ್ರಥಮ ದರ್ಜೆ ಸಹಾಯಕರು, ೧೨ ದ್ವಿತೀಯ ದರ್ಜೆ ಸಹಾಯಕರು, ಓರ್ವ ಬೆರಳಚ್ಚುಗಾರರು, ೨೯ ವನಪಾಲಕರು, ೩೬ ಅರಣ್ಯ ರಕ್ಷಕರು, ಏಳು ವಾಹನ ಚಾಲಕರು ಹಾಗೂ ಇಬ್ಬರು 'ಡಿ' ಗ್ರೂಪ್ ನೌಕರರೂ ಕಛೇರಿಯ ಸಿಬ್ಬಂದಿವರ್ಗದಲ್ಲಿರುತ್ತಾರೆ. ಧಾರವಾಡದಲ್ಲಿರುವ ಸಾಮಾಜಿಕ ಅರಣ್ಯವೃತ್ತದ ಅರಣ್ಯ ಸಂರಕ್ಷಣಾಧಿಕಾರಿಗಳು ಈ ಕಛೇರಿಯ ಮೇಲಾಧಿಕಾರಿಗಳಾಗಿರುತ್ತಾರೆ.

## ಆರ್ಥಿಕ ಹಾಗೂ ಸಾಂಖ್ಯಿಕ ಇಲಾಖೆ

ವಿಜಾಪುರದಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯು ೧೯೬೩ರಲ್ಲಿ ಆರಂಭವಾಗಿದ್ದು, ಇದು ಬೆಂಗಳೂರಿನಲ್ಲಿರುವ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಅಧೀನತೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಕಛೇರಿಗಳಿಂದ ಅಂಕಿ ಅಂಶಗಳ ಮಾಹಿತಿ ಸಂಗ್ರಹಣೆ ಹಾಗೂ ಪ್ರಕಟಣೆ ಮಾಡುವುದು ಈ ಕಛೇರಿಯ ಪ್ರಮುಖ ಉದ್ದೇಶವಾಗಿದೆ. ಅಲ್ಲದೆ ರಾಜ್ಯ ಹಾಗೂ ಕೇಂದ್ರ ಸರಕಾರದವರು ಕಾಲಕಾಲಕ್ಕೆ ವಹಿಸಿದ ಕೃಷಿ, ಆರ್ಥಿಕ, ಸಾಮಾಜಿಕ, ಔದ್ಯೋಗಿಕ, ಶೈಕ್ಷಣಿಕ, ಅಂಗವಿಕಲ, ಆರೋಗ್ಯ ಹಾಗೂ ಹಿಂದುಳಿದವರ ಸಾಮಾಜಿಕ ಅಭಿವೃದ್ಧಿ ಅಂಕಿ ಅಂಶಗಳನ್ನು ಸಂಗ್ರಹಿಸುವುದು ಮತ್ತು ಪ್ರಕಟಿಸುವುದು, ಜನನ ಮರಣ ನೋಂದಣಿ ಕಾರ್ಯದ ಉಸ್ತುವಾರಿ ಮೊದಲಾದ ಕಾರ್ಯ ಚಟುವಟಿಕೆಗಳನ್ನೂ ಸಹ ಈ ಕಾರ್ಯಾಲಯವು ನಿರ್ವಹಿಸುತ್ತಿದೆ. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ನೆರವಿಗಾಗಿ ಕಛೇರಿಯಲ್ಲಿ ಓರ್ವ ಸಹಾಯಕ ನಿರ್ದೇಶಕರೂ, ಆರು ಸಹಾಯಕ ಸಾಂಖ್ಯಿಕ ಅಧಿಕಾರಿಗಳೂ, ೧೬ ಸಾಂಖ್ಯಿಕ ನಿರೀಕ್ಷಕರೂ, ಓರ್ವ ಅಧೀಕ್ಷಕರೂ ಮತ್ತಿತರ ಸಿಬ್ಬಂದಿವರ್ಗದವರೂ ಸೇರಿದಂತೆ ಒಟ್ಟಾರೆ ೩೯ ಮಂದಿ ಕಾರ್ಯನಿರ್ವಹಿಸುತ್ತಿರುವರು.

### ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ ಉಪ ನಿರ್ದೇಶಕರ ಕಛೇರಿಯು ೧೯೮೪ ರಿಂದ ವಿಜಾಪುರದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇದರ ವ್ಯಾಪ್ತಿಯು ಜಿಲ್ಲಾ ಮಟ್ಟದ್ದಾಗಿರುತ್ತದೆ. ೧೯೮೪ರ ಪೂರ್ವದಲ್ಲಿ ಜಿಲ್ಲಾಧಿಕಾರಿಗಳ ಆಹಾರ ಸಹಾಯಕರೇ ಈ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಸಾರ್ವಜನಿಕ ವಿತರಣಾ ಪದ್ಧತಿಯ ಮೂಲಕ ಪಡಿತರ ಪದಾರ್ಥಗಳನ್ನು ವಿತರಿಸುವುದು, ಅವಶ್ಯಕ ವಸ್ತುಗಳ ಕಾಯ್ದೆ ಅಡಿಯಲ್ಲಿ ಕ್ರಮವನ್ನು ಜರುಗಿಸುವುದು, ಕಳ್ಳ ದಾಸ್ತಾನು ಆಗದಂತೆ ನೋಡಿಕೊಳ್ಳುವುದು, ಅವಶ್ಯಕ ವಸ್ತುಗಳ ಬೆಲೆ ನಿಯಂತ್ರಣದಲ್ಲಿಡುವುದು, ಪರಿಷ್ಕೃತ ಸಾರ್ವಜನಿಕ ವಿತರಣಾ ಪದ್ಧತಿಯನ್ವಯ ಬಡತನ ರೇಖೆಯ ಕೆಳಗಿರುವ ಫಲಾನುಭವಿಗಳಿಗೆ ಅತಿ ಕಡಿಮೆ ದರದಲ್ಲಿ ಪಡಿತರ ಪೂರೈಸುವುದು, ಕೂಪನ್ ಪದ್ಧತಿಯ ಮೇಲೆ ಸೀಮೆಎಣ್ಣೆಯನ್ನು ವಿತರಿಸುವುದು ಹಾಗೂ ಡೀಜಲ್ ಮತ್ತು ಪೆಟ್ರೋಲ್ ಮಾರಾಟದಲ್ಲಿ ಕಲಬೆರಕೆಯಾಗದಂತೆ ನೋಡಿಕೊಳ್ಳುವುದು ಇವೇ ಮುಂತಾದುವು ಈ ಕಛೇರಿಯ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ. ಉಪ ನಿರ್ದೇಶಕರ ನೆರವಿಗಾಗಿ ಕಛೇರಿಯಲ್ಲಿ ಓರ್ವ ಸಹಾಯಕ ನಿರ್ದೇಶಕರು (ಆಹಾರ ಮತ್ತು ನಾಗರಿಕ ಸರಬರಾಜು), ಓರ್ವ ಲೆಕ್ಕ ಅಧೀಕ್ಷಕರು, ಓರ್ವ ಶಿರಸ್ತೇದಾರರು, ಓರ್ವ ಭತ್ತ ಖರೀದಿ ಸಹಾಯಕ, ಓರ್ವ ನಾಗರಿಕ ಸರಬರಾಜು ನಿರೀಕ್ಷಕರು ಮತ್ತಿತರ ಸಿಬ್ಬಂದಿವರ್ಗದವರೂ ಸೇರಿದಂತೆ ೧೮ ಮಂದಿ ಕಾರ್ಯನಿರ್ವಹಿಸುತ್ತಿರುವರು. ವಿಜಾಪುರದ ಜಿಲ್ಲಾಧಿಕಾರಿಗಳು ಹಾಗೂ ಬೆಂಗಳೂರಿನಲ್ಲಿರುವ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ನಿರ್ದೇಶಕರು ಇವರ ಮೇಲಾಧಿಕಾರಿಗಳಾಗಿರುತ್ತಾರೆ.

### ಉದ್ಯೋಗ ಮತ್ತು ತರಬೇತಿ ಇಲಾಖೆ

ವಿಜಾಪುರದಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವು ೧೯೬೦ರಲ್ಲಿ ಆರಂಭವಾಗಿದ್ದು ಜಿಲ್ಲಾ ಉದ್ಯೋಗಾಧಿಕಾರಿಗಳು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಇದರ ಕಾರ್ಯವ್ಯಾಪ್ತಿಯು ಜಿಲ್ಲಾ ಮಟ್ಟದ್ದಾಗಿದ್ದು ವಿವಿಧ ನಿಯೋಜಕರು ಅಧಿಸೂಚಿಸುವ ಹುದ್ದೆಗಳಿಗೆ ಸೂಕ್ತ ಹಾಗೂ ಅರ್ಹ ಅಭ್ಯರ್ಥಿಗಳ ಪುರಸ್ಕರಣೆ, ವೃತ್ತಿ ಮಾರ್ಗದರ್ಶನ ಕಾರ್ಯಕ್ರಮದ ಅನುಷ್ಠಾನ, ಉದ್ಯೋಗ ಮಾರುಕಟ್ಟೆ ಮಾಹಿತಿ ಸಂಗ್ರಹಣೆ ಹಾಗೂ ಬಿತ್ತರಣೆ ಇದರ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ. ಈ ಕಛೇರಿಯ ಮುಖ್ಯಸ್ಥರ ಪದನಾಮವನ್ನು ೧೯೭೧ರಲ್ಲಿ ಉದ್ಯೋಗಾಧಿಕಾರಿ ಎಂದು ಪರಿವರ್ತಿಸಲಾಯಿತು. ಉದ್ಯೋಗಾಧಿಕಾರಿಗಳ ನೆರವಿಗಾಗಿ ಓರ್ವ ಉದ್ಯೋಗಾಧಿಕಾರಿ (ವೃತ್ತಿ ಮಾರ್ಗದರ್ಶನ), ಓರ್ವ ಸಹಾಯಕ ಉದ್ಯೋಗಾಧಿಕಾರಿ, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರೂ ಹಾಗೂ ಗ್ರೂಪ್ 'ಡಿ' ನೌಕರರೂ ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವರು. ಬಾಗಲಕೋಟೆಯಲ್ಲಿ ೧೯೭೫ ರಿಂದ ಉದ್ಯೋಗಾಧಿಕಾರಿಗಳು ಮುಖ್ಯಸ್ಥರಾಗಿರುವ ನಗರ ಉದ್ಯೋಗ ವಿನಿಮಯ ಕೇಂದ್ರವು ಪ್ರಾರಂಭವಾಗಿದ್ದು ಬಾಗಲಕೋಟೆ, ಬಾದಾಮಿ ಮತ್ತು ಹುನಗುಂದ ತಾಲೂಕುಗಳಲ್ಲಿ ವಾಸಿಸುವ ಎಸ್.ಎಸ್.ಎಲ್.ಸಿಗಿಂತ ಕಡಿಮೆ ವಿದ್ಯಾರ್ಹತೆಯುಳ್ಳ ಉದ್ಯೋಗಾರ್ಥಿಗಳ ಹೆಸರನ್ನು ಇಲ್ಲಿ ನೋಂದಾಯಿಸಲಾಗುತ್ತದೆ.

### ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯು ವಿಜಾಪುರದಲ್ಲಿ ೧೯೭೭ರಲ್ಲಿ ಪ್ರಾರಂಭವಾಗಿದ್ದು ಇದರ ಕಾರ್ಯವ್ಯಾಪ್ತಿಯು ಜಿಲ್ಲಾ ಮಟ್ಟದ್ದಾಗಿರುತ್ತದೆ. ಜಿಲ್ಲೆಯಲ್ಲಿ ಕನ್ನಡವನ್ನು ಆಡಳಿತದಲ್ಲಿ ಪರಿಣಾಮಕಾರಿಯಾಗಿ ಬಳಸಲು ಅಗತ್ಯವಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು, ಕಲಾವಿದರನ್ನು

ಪ್ರೋತ್ಸಾಹಿಸುವುದು, ಪಟ್ಟದಕಲ್ಲು, ನವರಸಪುರ ಉತ್ಸವ, ವಚನ ಸಂಗೀತೋತ್ಸವ, ಚಾಲುಕ್ಯ ಉತ್ಸವ ಮೊದಲಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದು, ಇವೇ ಮುಂತಾದುವು ಈ ಕಛೇರಿಯ ಪ್ರಮುಖ ಕಾರ್ಯ ಚಟುವಟಿಕೆಗಳಾಗಿರುತ್ತವೆ. ಸಹಾಯಕ ನಿರ್ದೇಶಕರ ನೆರವಿಗಾಗಿ ಕಛೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು ಮತ್ತು ಓರ್ವ ದಲಾಯತ ಕಾರ್ಯನಿರ್ವಹಿಸುತ್ತಿರುವರು. ಬೆಳಗಾವಿ ವಿಭಾಗದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕರು ಈ ಕಛೇರಿಯ ತಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

## ಕರ್ನಾಟಕ ಭೂ ಸೇನಾ ನಿಗಮ ನಿಯಮಿತ

ಕರ್ನಾಟಕ ಭೂಸೇನಾ ನಿಗಮ ನಿಯಮಿತವು ವಿಜಾಪುರದಲ್ಲಿ ೧೯೭೫ರಲ್ಲಿ ಪ್ರಾರಂಭವಾಗಿದ್ದು ಉಪ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಆರಂಭದಲ್ಲಿ ಇದರ ಕಾರ್ಯವ್ಯಾಪ್ತಿಯು ವಿಜಾಪುರ, ಬೆಳಗಾವಿ ಹಾಗೂ ಕಾರವಾರ ಜಿಲ್ಲೆಗಳನ್ನೊಳಗೊಂಡಿದ್ದು, ೧೯೭೬ರಲ್ಲಿ ಕಾರವಾರದಲ್ಲೂ ಮತ್ತು ೧೯೭೯ರಲ್ಲಿ ಬೆಳಗಾವಿಯಲ್ಲೂ ಈ ನಿಗಮದ ಸಹಾಯಕ ನಿರ್ದೇಶಕರ ಕಛೇರಿಗಳು ಆರಂಭವಾದುದರಿಂದ ಪ್ರಸ್ತುತ ಇದರ ಕಾರ್ಯ ವ್ಯಾಪ್ತಿಯ ವಿಜಾಪುರ, ಬಸವನ ಬಾಗೇವಾಡಿ, ಮುದ್ದೇಬಿಹಾಳ, ಇಂಡಿ ಹಾಗೂ ಸಿಂದಗಿ ತಾಲೂಕುಗಳಿಗೆ ಸೀಮಿತವಾಗಿದ್ದು ಉಳಿದ ತಾಲೂಕುಗಳು ಬಾಗಲಕೋಟೆಯಲ್ಲಿರುವ ಭೂಸೇನಾ ನಿಗಮ ನಿಯಮಿತದ ಕಾರ್ಯ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಸರಕಾರಿ ಇಲಾಖೆಗಳ ಕಟ್ಟಡ ಕಾಮಗಾರಿ ಹಾಗೂ ಜಿಲ್ಲಾ ಪಂಚಾಯಿತಿವತಿಯಿಂದ ವಹಿಸಲ್ಪಡುವ ಕಾಮಗಾರಿಗಳನ್ನು ಮಂಜೂರಾದ ಅಂದಾಜು ಯೋಜನೆಯಂತೆ ಕಾರ್ಯನಿರ್ವಹಿಸಿ ಹಾಗೂ ನಿಗದಿತ ವೇಳೆಯಲ್ಲಿ ಪೂರ್ಣಗೊಳಿಸಿ ಕಾಮಗಾರಿವಹಿಸಿದ ಇಲಾಖೆಗಳಿಗೆ ಮುಂದಿನ ಉಸ್ತುವಾರಿಗಾಗಿ ಹಸ್ತಾಂತರಿಸುವುದು ಇದರ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ. ಈ ಕಛೇರಿಯ ಅಧೀನದಲ್ಲಿ ಇಂಡಿ ಹಾಗೂ ವಿಜಾಪುರದಲ್ಲಿ ಈ ನಿಗಮದ ಸಹಾಯಕ ನಿರ್ದೇಶಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಬೆಳಗಾವಿಯಲ್ಲಿರುವ ಕರ್ನಾಟಕ ಭೂಸೇನಾ ನಿಗಮದ ಜಂಟಿ ನಿರ್ದೇಶಕರು ಹಾಗೂ ಬೆಂಗಳೂರಿನಲ್ಲಿರುವ ಈ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಈ ಕಛೇರಿಯ ಮೇಲಾಧಿಕಾರಿಗಳಾಗಿರುತ್ತಾರೆ.

## ಕರ್ನಾಟಕ ಸರ್ಕಾರ ವಿಮಾ ಇಲಾಖೆ

ಜಿಲ್ಲಾ ವಿಮಾ ಅಧಿಕಾರಿಗಳ ಕಛೇರಿಯು ವಿಜಾಪುರದಲ್ಲಿ ೧೯೭೬ರಲ್ಲಿ ಪ್ರಾರಂಭವಾಗಿದ್ದು ಜಿಲ್ಲಾ ವಿಮಾ ಅಧಿಕಾರಿಗಳು ಇದರ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲೆಯೊಳಗಿನ ಎಲ್ಲಾ ಸರಕಾರಿ ಇಲಾಖೆಗಳಲ್ಲಿನ ನೌಕರರನ್ನು ವಿಮೆಗೊಳಪಡಿಸುವುದು, ಪಾಲಿಸಿಗಳ ಇತ್ಯರ್ಥಗೊಳಿಸುವಿಕೆ, ೧೯೫೮ ರ ಕಡ್ಡಾಯ ಜೀವ ವಿಮಾ ನಿಯಮಗಳನ್ವಯ ಹೊಸ ವಾಹನಗಳ ವಿಮಾ ಪತ್ರ ನೀಡುವಿಕೆ ಮತ್ತು ನಗರಸಭೆ, ಪುರಸಭೆ ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳ ಕುಟುಂಬ ಕಲ್ಯಾಣ ನಿಧಿ ಪ್ರಕರಣಗಳನ್ನು ಇತ್ಯರ್ಥ ಮಾಡುವುದು ಇವೇ ಮುಂತಾದುವು ಈ ಕಛೇರಿಯ ಕಾರ್ಯಗಳಾಗಿರುತ್ತವೆ. ಈ ಕಛೇರಿಯ ಆರಂಭದಲ್ಲಿ ಜಿಲ್ಲಾ ವಿಮಾ ಅಧಿಕಾರಿಗಳ ನೆರವಿಗಾಗಿ ಓರ್ವ ಅಧೀಕ್ಷಕರು, ಇಬ್ಬರು ಪ್ರಥಮ ದರ್ಜೆ ಸಹಾಯಕರು, ಮತ್ತಿತರ ಸಿಬ್ಬಂದಿ ವರ್ಗದವರೂ ಸೇರಿದಂತೆ ಒಟ್ಟಾರೆ ೬ ಹುದ್ದೆಗಳಿದ್ದು, ಪ್ರಸ್ತುತ ಕಛೇರಿಯಲ್ಲಿ ಮೂವರು ಅಧೀಕ್ಷಕರು, ೯ ಪ್ರಥಮ ದರ್ಜೆ ಸಹಾಯಕರು, ೧೧ ದ್ವಿತೀಯ ದರ್ಜೆ ಸಹಾಯಕರು, ಓರ್ವ ಬೆರಳಚ್ಚುಗಾರರು ಮತ್ತು ಮೂವರು ಗ್ರೂಪ್ 'ಡಿ'ನೌಕರರೂ ಇದ್ದು ಒಟ್ಟಾರೆ ೨೮ ಹುದ್ದೆಗಳಿವೆ. ಬೆಳಗಾವಿಯಲ್ಲಿರುವ ವಿಮಾ ಇಲಾಖೆ ವಿಭಾಗೀಯ ಕಛೇರಿಯ ಉಪ ನಿರ್ದೇಶಕರು ಹಾಗೂ ಬೆಂಗಳೂರಿನಲ್ಲಿರುವ ಕರ್ನಾಟಕ ಸರ್ಕಾರ ವಿಮಾ ಇಲಾಖೆಯ ನಿರ್ದೇಶಕರು ಈ ಕಛೇರಿಯ ಮೇಲಾಧಿಕಾರಿಗಳಾಗಿರುತ್ತಾರೆ.

**ಕಾರಾಗೃಹ ಇಲಾಖೆ**

ವಿಜಾಪುರದಲ್ಲಿ ಕೇಂದ್ರ ಕಾರಾಗೃಹದ ಅಧೀಕ್ಷಕರ ಕಛೇರಿಯು ಕಾರ್ಯನಿರ್ವಹಿಸುತ್ತಿದ್ದು, ಕಛೇರಿಯಲ್ಲಿ ಅಧೀಕ್ಷಕರ ನೆರವಿಗಾಗಿ ಓರ್ವ ವೈದ್ಯಾಧಿಕಾರಿಗಳು, ಇಬ್ಬರು ಶಿಕ್ಷಕರು, ಓರ್ವ ಕಛೇರಿ ಅಧೀಕ್ಷಕರು, ಓರ್ವ ಕೃಷಿ ಸಹಾಯಕರು ಹಾಗೂ ಮುಖ್ಯ ವೀಕ್ಷಕರೂ ಸೇರಿದಂತೆ ಒಟ್ಟಾರೆ ೯೮ ಮಂದಿ ಸಿಬ್ಬಂದಿವರ್ಗ ದವರಿರುತ್ತಾರೆ. ಬಂದಿಗಳ ಸಂರಕ್ಷಣೆ ಹಾಗೂ ಭದ್ರತೆ ಇವರ ಜವಾಬ್ದಾರಿಯಾಗಿರುತ್ತದೆ. ಬೆಂಗಳೂರಿನಲ್ಲಿರುವ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾ ನಿರೀಕ್ಷಕರು ಇವರು ಮೇಲಾಧಿಕಾರಿಗಳಾಗಿರುತ್ತಾರೆ. ಬಾಗಲಕೋಟೆಯಲ್ಲಿ ಒಂದು ಉಪಬಂಧೀಖಾನೆಯೂ ಮತ್ತು ಜಮಖಂಡಿಯಲ್ಲಿ ಒಂದು ಉಪಕಾರಾಗೃಹವೂ ಇದೆ. (ವಿವರಗಳಿಗೆ ೧೦ ನೇ ಅಧ್ಯಾಯವನ್ನು ನೋಡಿರಿ).

**ಕೃಷಿ ಇಲಾಖೆ**

ಕೃಷಿ ಇಲಾಖೆಯು ಪುನರ್ ರಚನೆಯಾಗುವ ಮೊದಲು ಜಿಲ್ಲಾ ಮಟ್ಟದಲ್ಲಿ ಪ್ರಧಾನಕೃಷಿ ಅಧಿಕಾರಿಗಳ ಹಾಗೂ ಉಪಕೃಷಿ ನಿರ್ದೇಶಕರು (ಭೂಸಾರ ಸಂರಕ್ಷಣೆ) ಕಛೇರಿಗಳು ಅಸ್ತಿತ್ವದಲ್ಲಿದ್ದವು. ಕೃಷಿ ವಿಸ್ತರಣಾ ಯೋಜನೆ ಹಾಗೂ ಭೂಸಾರ ಸಂರಕ್ಷಣಾ ಯೋಜನೆಗಳನ್ನು ವಿಲೀನಗೊಳಿಸಿದುದರಿಂದ ಜಿಲ್ಲಾ ಮಟ್ಟದಲ್ಲಿ ದಿನಾಂಕ ೧.೬.೧೯೮೫ ರಲ್ಲಿ ಜಂಟಿ ಕೃಷಿ ನಿರ್ದೇಶಕರ ಕಛೇರಿಯು ವಿಜಾಪುರದಲ್ಲಿ ಅಸ್ತಿತ್ವಕ್ಕೆ ಬಂದಿತು. ಜಂಟಿ ಕೃಷಿ ನಿರ್ದೇಶಕರ ನೆರವಿಗಾಗಿ ಇವರ ಕಛೇರಿಯಲ್ಲಿ ಓರ್ವ ಸಹಾಯಕ ಕೃಷಿ ನಿರ್ದೇಶಕರು (ಕೇಂದ್ರ), ಓರ್ವ ಆಡಳಿತ ಸಹಾಯಕರು, ಇಬ್ಬರು ಸಹಾಯಕ ಕೃಷಿ ಅಧಿಕಾರಿಗಳು (ತಾಂತ್ರಿಕ ಸಹಾಯಕರು), ಇಬ್ಬರು ಅಧೀಕ್ಷಕರು, ಐದು ಪ್ರಥಮ ದರ್ಜೆ ಸಹಾಯಕರು, ನಾಲ್ಕು ದ್ವಿತೀಯ ದರ್ಜೆ ಸಹಾಯಕರು, ಓರ್ವ ಶೀಘ್ರಲಿಪಿಗಾರರೂ ಹಾಗೂ ಇತರ ಸಿಬ್ಬಂದಿವರ್ಗದವರೂ ಸೇರಿದಂತೆ ೨೪ ಮಂದಿ ಕಾರ್ಯ ನಿರ್ವಹಿಸುತ್ತಿರುವರು. ಈ ಕಛೇರಿಯ ಉಸ್ತುವಾರಿಯಲ್ಲಿ ಈ ಮುಂದೆ ಸೂಚಿಸಿರುವ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ.

೧. ವಿಜಾಪುರದ ಉಪ ಕೃಷಿ ನಿರ್ದೇಶಕರ ವ್ಯಾಪ್ತಿಗೆ ಒಳಪಡುವ ವಿಜಾಪುರ, ಇಂಡಿ, ಸಿಂದಗಿ, ಬಸವನಬಾಗೇವಾಡಿ ಹಾಗೂ ಜಮಖಂಡಿ ತಾಲೂಕುಗಳ ಸಹಾಯಕ ಕೃಷಿ ನಿರ್ದೇಶಕರು ಮತ್ತು ಬಾಗಲಕೋಟೆಯ ಉಪ ಕೃಷಿ ನಿರ್ದೇಶಕರ ವ್ಯಾಪ್ತಿಗೆ ಒಳಪಡುವ ಬಾಗಲಕೋಟೆ, ಬಾದಾಮಿ, ಹುನಗುಂದ, ಬೀಳಗಿ, ಮುದ್ದೇಬಿಹಾಳ ಮತ್ತು ಮುಧೋಳ ತಾಲೂಕುಗಳ ಸಹಾಯಕ ಕೃಷಿ ನಿರ್ದೇಶಕರುಗಳು, ಕೃಷಿ ವಿಸ್ತರಣಾ ಯೋಜನೆ ಹಾಗೂ ಭೂಸಾರ ಸಂರಕ್ಷಣಾ ಯೋಜನೆಗಳ ಅನುಷ್ಠಾನಾಧಿಕಾರಿಗಳಾಗಿರುತ್ತಾರೆ. ೨. ಬಾಗಲಕೋಟೆಯಲ್ಲಿರುವ ಉಪ ಕೃಷಿ ನಿರ್ದೇಶಕರು (ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರ) ಕಛೇರಿಯಲ್ಲಿ ಇಲಾಖೆಯ ವಿಸ್ತರಣಾ ಸಿಬ್ಬಂದಿಗಳಿಗೆ ಹಾಗೂ ಗ್ರಾಮೀಣ ರೈತರಿಗೆ ಕೃಷಿ ಚಟುವಟಿಕೆಗಳ ಬಗ್ಗೆ ತರಬೇತಿಗಳನ್ನು ನೀಡಲಾಗುವುದು. ೩) ಉಪ ನಿರ್ದೇಶಕರು (ರೈತ ತರಬೇತಿ ಮತ್ತು ಶಿಕ್ಷಣ ಕೇಂದ್ರ), ಜಮಖಂಡಿ ಕಛೇರಿಯಲ್ಲಿ ಗ್ರಾಮೀಣ ಯುವ ರೈತರಿಗೆ ಮತ್ತು ರೈತ ಮಹಿಳೆಯರಿಗೆ ಕೃಷಿ ತಾಂತ್ರಿಕತೆಯ ಬಗ್ಗೆ ತರಬೇತಿಗಳನ್ನು ನೀಡಲಾಗುವುದು. ೪) ವಿಜಾಪುರದಲ್ಲಿರುವ ಸಹಾಯಕ ಕೃಷಿ ನಿರ್ದೇಶಕರು (ಪ್ರಾಂಶುಪಾಲರು), ಭೂಸಾರ ಸಂರಕ್ಷಣಾ ತರಬೇತಿ ಕೇಂದ್ರದಲ್ಲಿ ರಾಜ್ಯದ ಕೃಷಿ ಇಲಾಖೆಯ ವಿಸ್ತರಣಾ ಸಿಬ್ಬಂದಿ ಕೃಷಿ ಸಹಾಯಕರಿಗೆ ಭೂಸಾರ ಸಂರಕ್ಷಣೆಯ ಬಗ್ಗೆ ತರಬೇತಿಯನ್ನು ನೀಡಲಾಗುವುದು. ೫) ಜಮಖಂಡಿಯಲ್ಲಿರುವ ಕೃಷಿ ಅಧಿಕಾರಿ, ಮಣ್ಣು ಆರೋಗ್ಯ ಕೇಂದ್ರದಲ್ಲಿ ಮಣ್ಣು ಮತ್ತು ನೀರಿನ ಪರೀಕ್ಷೆಗಳನ್ನು ಆಧುನಿಕ ಬೇಸಾಯ ಪದ್ಧತಿಗಳಿಗನುಗುಣವಾಗಿ ಮಾಡಿ ವಿಶ್ಲೇಷಣಾ ವರದಿಯನ್ನು ನೀಡಲಾಗುತ್ತದೆ. ೬) ಆಲಮೇಲದಲ್ಲಿರುವ ಕೃಷಿ ಅಧಿಕಾರಿಯ ಅಧೀನದಲ್ಲಿರುವ ಕೃಷಿ ಪಾಠಶಾಲೆಯಲ್ಲಿ ಗ್ರಾಮೀಣ ರೈತ ಮಕ್ಕಳಿಗೆ ಕೃಷಿ ಬಗ್ಗೆ ತರಬೇತಿಗಳನ್ನು ನೀಡಲಾಗುವುದು. ೭) ಬಾಗಲಕೋಟೆಯಲ್ಲಿನ ಕೃಷಿ ಅಧಿಕಾರಿ (ಕೃಷಿ ಕ್ಷೇತ್ರ)ಹಾಗೂ

ಆಲಮೇಲ, ಇಂಡಿ, ಮದರಖಂಡಿ, ಮುದ್ದೇಬಿಹಾಳ ಮತ್ತು ಮುಧೋಳದಲ್ಲಿರುವ ಬೀಜೋತ್ಪಾದನಾ ಕೇಂದ್ರದ ವ್ಯವಸ್ಥಾಪಕರುಗಳ ಕಛೇರಿಗಳಲ್ಲಿ ಬೀಜೋತ್ಪಾದನಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಬೆಂಗಳೂರಿನಲ್ಲಿರುವ ಕೃಷಿ ನಿರ್ದೇಶಕರು, ಜಂಟಿ ಕೃಷಿ ನಿರ್ದೇಶಕರ ಕಛೇರಿಯ ಮೇಲಾಧಿಕಾರಿಗಳಾಗಿರುತ್ತಾರೆ. ವಿಜಾಪುರದಲ್ಲಿ ಕೃಷಿ ಮಹಾವಿದ್ಯಾಲಯವು ಇದೆ. (ವಿವರಗಳಿಗೆ ಅ.೧೩ ರನ್ನು ನೋಡಿರಿ).

## ಕೃಷಿ ಮಾರುಕಟ್ಟೆ ಇಲಾಖೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಮುಂಬೈ ಕಾಟನ್ ಮಾರ್ಕೆಟ್ ಕಾಯ್ದೆ ೧೯೨೭ ರ ಅನ್ವಯ ೧೯೩೮ರಲ್ಲಿ ವಿಜಾಪುರದಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಪ್ರಾರಂಭದಲ್ಲಿ ಇದರ ಕಾರ್ಯ ವ್ಯಾಪ್ತಿಯು ವಿಜಾಪುರ, ಬಸವನಬಾಗೇವಾಡಿ, ಸಿಂದಗಿ, ಇಂಡಿ ಹಾಗೂ ಮುದ್ದೇಬಿಹಾಳ ತಾಲೂಕುಗಳಿಗೆ ಸೀಮಿತವಾಗಿತ್ತು. ಇದರ ಅಧಿಕಾರ ವ್ಯಾಪ್ತಿಯು ೧೯೯೬ ರಿಂದ ವಿಜಾಪುರ ಮತ್ತು ಬಸವನ ಬಾಗೇವಾಡಿ ತಾಲೂಕುಗಳಿಗೆ ಮಾತ್ರ ಸೀಮಿತವಾಗಿದೆ. ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿ) ಕಾಯ್ದೆ ೧೯೬೬ ಮತ್ತು ನಿಯಮಗಳು ೧೯೬೮ ರ ಅಡಿಯಲ್ಲಿ ಬರುವ ಕೃಷಿ ಉತ್ಪನ್ನಗಳ ಮಾರಾಟವನ್ನು ನಿಯಂತ್ರಿಸುವುದು ಇದರ ಪ್ರಧಾನ ಜವಾಬ್ದಾರಿಯಾಗಿದೆ. ಇದರ ಅಧೀನದಲ್ಲಿ ಬಸವನಬಾಗೇವಾಡಿ, ಹೂವಿನ ಹಿಪ್ಪರಗಿ, ಗೊಳಸಂಗಿ, ತಿಕೋಟಾ, ತಿಡಗುಂದಿ ಹಾಗೂ ಬಬಲೇಶ್ವರದಲ್ಲಿ ಉಪಮಾರುಕಟ್ಟೆಗಳಿವೆ. ಕಾರ್ಯದರ್ಶಿಗಳು ಈ ಸಮಿತಿಯ ಮುಖ್ಯಸ್ಥರಾಗಿದ್ದು ಇವರ ನೆರವಿಗಾಗಿ ಓರ್ವ ಸಹಾಯಕ ಕಾರ್ಯದರ್ಶಿಗಳೂ, ಓರ್ವ ಅಧೀಕ್ಷಕರು ಮತ್ತಿತರ ಸಿಬ್ಬಂದಿವರ್ಗದವರೂ ಸೇರಿದಂತೆ ಒಟ್ಟಾರೆ ೪೫ ಮಂದಿ ಸಿಬ್ಬಂದಿವರ್ಗದವರಿರುತ್ತಾರೆ. ಇದೇ ರೀತಿ ಮಹಾಲಿಂಗಪುರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧೀನದಲ್ಲಿ ಮುಧೋಳ ಮತ್ತು ಲೋಕಾಪುರದಲ್ಲಿ ಉಪ ಮಾರುಕಟ್ಟೆಗಳೂ, ಬಾಗಲಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧೀನದಲ್ಲಿ ಕಲಾದಗಿ, ಗಲಗಲಿ ಮತ್ತು ಬೀಳಗಿಯಲ್ಲಿ ಉಪ ಮಾರುಕಟ್ಟೆಗಳೂ, ಜಮಖಂಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧೀನದಲ್ಲಿ ತೇರದಾಳ ಮತ್ತು ಸಾವಳಗಿಯಲ್ಲಿ ಉಪ ಮಾರುಕಟ್ಟೆಗಳೂ, ಹುನಗುಂದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧೀನದಲ್ಲಿ ಇಳಕಲ್, ಅಮೀನಗಡ ಮತ್ತು ಗುಡೂರದಲ್ಲಿ ಉಪಮಾರುಕಟ್ಟೆಗಳೂ, ತಾಳಿಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಮುದ್ದೇಬಿಹಾಳ ಮತ್ತು ನಾಲತವಾಡದಲ್ಲಿ ಉಪ ಮಾರುಕಟ್ಟೆಗಳೂ ಹಾಗೂ ಸಿಂದಗಿ ಕೃಷಿಉತ್ಪನ್ನ ಮಾರುಕಟ್ಟೆ ಸಮಿತಿಯ ಅಧೀನದಲ್ಲಿ ಇಂಡಿ, ಚಡಚಣ, ಆಲಮೇಲ ಮತ್ತು ದೇವರ ಹಿಪ್ಪರಗಿಯಲ್ಲಿ ಉಪಮಾರುಕಟ್ಟೆಗಳೂ ಇವೆ. ಬೆಂಗಳೂರಿನಲ್ಲಿರುವ ಕೃಷಿ ಮಾರುಕಟ್ಟೆ ಇಲಾಖೆಯ ನಿರ್ದೇಶಕರು ಈ ಸಮಿತಿಗಳ ಮೇಲಾಧಿಕಾರಿಗಳಾಗಿರುತ್ತಾರೆ.

## ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ವಿಜಾಪುರದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರವು ೧೯೭೮ರಲ್ಲಿ ಆರಂಭವಾದಾಗ, ಮಹಾಕಾರ್ಯನಿರ್ವಾಹಕರು ಇದರ ಮುಖ್ಯಸ್ಥರಾಗಿದ್ದರು. ಮುಖ್ಯಸ್ಥರ ಹುದ್ದೆಯ ಪದನಾಮವನ್ನು ೧೯೯೬ ರಲ್ಲಿ ಜಂಟಿ ನಿರ್ದೇಶಕರು ಎಂದು ಬದಲಾಯಿಸಲಾಯಿತು. ಇದರ ಅಧಿಕಾರ ವ್ಯಾಪ್ತಿಯು ಜಿಲ್ಲಾ ಮಟ್ಟಕ್ಕೆ ಸೀಮಿತವಾಗಿರುತ್ತದೆ. ಜಿಲ್ಲೆಯ ಆರ್ಥಿಕ ಅಂಶಗಳನ್ನು ಗಮನಿಸಿ ಕೈಗಾರಿಕೆ ಮತ್ತು ವಾಣಿಜ್ಯ ಬೆಳವಣಿಗೆಗೆ ಯೋಜನೆಗಳನ್ನು ರೂಪಿಸುವುದು ಮತ್ತು ಜಿಲ್ಲೆಯಲ್ಲಿರುವ ಗ್ರಾಮೀಣ ಕರಕುಶಲ ತರಬೇತಿ ಕೇಂದ್ರಗಳ ಚಟುವಟಿಕೆಗಳ ಮೇಲ್ವಿಚಾರಣೆ ಮಾಡುವುದು, ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ತತ್ಕಾಲಿಕ ಹಾಗೂ ಶಾಶ್ವತ ನೋಂದಣಿ ಪ್ರಮಾಣ ಪತ್ರವನ್ನು ನೀಡುವುದು, ವಿಶ್ವಯೋಜನೆ, ಸಣ್ಣ ಉಳಿತಾಯ ಯೋಜನೆ, ನಬಾರ್ಡ್ ಯೋಜನೆ, ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆ ಇವೇ ಮೊದಲಾದ ಯೋಜನೆಗಳಡಿಯಲ್ಲಿ ಕಾರ್ಯಕ್ರಮಗಳನ್ನು ಜಾರಿಗೆ ತರುವುದು, ಇವೇ ಮೊದಲಾದುವು ಈ ಕೇಂದ್ರದ ಪ್ರಧಾನ

ಕರ್ತವ್ಯಗಳಾಗಿರುತ್ತವೆ. ಜಂಟಿ ನಿರ್ದೇಶಕರ ನೆರವಿಗಾಗಿ ಇಬ್ಬರು ಉಪ ನಿರ್ದೇಶಕರು, ಓರ್ವ ಸಹಾಯಕ ನಿರ್ದೇಶಕರು, ಓರ್ವ ಅಧೀಕ್ಷಕರು ಮತ್ತಿತರ ಸಿಬ್ಬಂದಿವರ್ಗದವರೂ ಸೇರಿದಂತೆ ಒಟ್ಟಾರೆ ೧೫ ಮಂದಿ ಸಿಬ್ಬಂದಿವರ್ಗದವರಿರುತ್ತಾರೆ. ಈ ಕಛೇರಿಯ ಅಧೀನದಲ್ಲಿ ತಾಲೂಕು ಕೈಗಾರಿಕಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಆಯುಕ್ತರು, ಕೈಗಾರಿಕಾ ಅಭಿವೃದ್ಧಿ ಮತ್ತು ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರು ಈ ಕಛೇರಿಯ ಮೇಲಾಧಿಕಾರಿಗಳಾಗಿರುತ್ತಾರೆ.

## ಕೈಮಗ್ಗ ಮತ್ತು ಜವಳಿ ಇಲಾಖೆ

ವಿಜಾಪುರದಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರ ಕಛೇರಿಯು ಕಾರ್ಯನಿರ್ವಹಿಸುತ್ತಿದ್ದು ಆರಂಭದಲ್ಲಿ ಇದು ವಿಜಾಪುರದಲ್ಲಿರುವ ಜಿಲ್ಲಾ ಕೈಗಾರಿಕಾ ಕೇಂದ್ರದ ಮಹಾಕಾರ್ಯ ನಿರ್ವಾಹಕರ ವ್ಯಾಪ್ತಿಯಲ್ಲಿದ್ದು ಜಿಲ್ಲಾ ಪಂಚಾಯಿತಿಯು ೧.೪.೧೯೮೭ ರಲ್ಲಿ ಅಸ್ತಿತ್ವಕ್ಕೆ ಬಂದನಂತರ ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಗೆ ಒಳಪಟ್ಟಿದೆ. ಜಿಲ್ಲೆಯಲ್ಲಿರುವ ಎಲ್ಲಾ ಕೈಮಗ್ಗ ನೇಕಾರ ಸಹಕಾರಿ ಸಂಘಗಳಿಗೆ ಹಾಗೂ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ, ಜಿಲ್ಲಾ ಪಂಚಾಯಿತಿ, ರಾಜ್ಯ ವಲಯ ಹಾಗೂ ಕೇಂದ್ರವಲಯ ಯೋಜನೆಗಳ ಸಹಾಯ ಸವಲತ್ತು ಒದಗಿಸಿಕೊಡುವುದು ಇದರ ಪ್ರಮುಖ ಉದ್ದೇಶವಾಗಿದೆ. ಈ ಕಛೇರಿಯಲ್ಲಿ ಉಪ ನಿರ್ದೇಕರ ನೆರವಿಗಾಗಿ ಓರ್ವ ಜವಳಿ ಪ್ರವರ್ಧನಾಧಿಕಾರಿಗಳು, ದ್ವಿತೀಯ ದರ್ಜೆ ಸಹಾಯಕರು, ವಾಹನ ಚಾಲಕರು ಹಾಗೂ 'ಡಿ'ಗ್ರೂಪ್ ನೌಕರರು ಕಾರ್ಯ ನಿರ್ವಹಿಸುತ್ತಿರುವರು. ಈ ಕಛೇರಿಯ ಅಧೀನದಲ್ಲಿ ಬಾಗಲಕೋಟೆ ಹಾಗೂ ಜಮಖಂಡಿಗಳಲ್ಲಿ ಉಪ ವಿಭಾಗ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ.

## ಖಜಾನೆ ಇಲಾಖೆ

ಜಿಲ್ಲಾ ಖಜಾನೆ ಅಧಿಕಾರಿಗಳ ಕಛೇರಿಯು ಮೊದಲಿಗೆ ಕಂದಾಯ ಇಲಾಖೆಯ ಅಧೀನದಲ್ಲಿದ್ದು ೧೯೬೮ರಲ್ಲಿ ಖಜಾನೆ ಇಲಾಖೆಯು ಅಸ್ತಿತ್ವಕ್ಕೆ ಬಂದ ನಂತರ ಈ ಕಛೇರಿಯು ಖಜಾನೆ ನಿರ್ದೇಶಕರು, ಬೆಂಗಳೂರು ಇವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದರ ಕಾರ್ಯವ್ಯಾಪ್ತಿಯು ಜಿಲ್ಲಾಮಟ್ಟದ್ದಾಗಿದ್ದು ಇದರ ಅಧೀನದಲ್ಲಿ ಜಿಲ್ಲೆಯ ತಾಲೂಕುಗಳಲ್ಲಿ ಹಾಗೂ ಇಳಕಲ್ (ಹುನಗುಂದ ತಾಲೂಕು), ನಿಡಗುಂದಿ ಮತ್ತು ಆಲಮಟ್ಟಿ (ಬಸವನ ಬಾಗೇವಾಡಿ ತಾಲೂಕು), ತಾಳಿಕೋಟೆ (ಮುದ್ದೇಬಿಹಾಳ ತಾಲೂಕು), ಗುಳೇದಗುಡ್ಡ (ಬಾದಾಮಿ ತಾಲೂಕು), ಬನಹಟ್ಟಿ (ಜಮಖಂಡಿ ತಾಲೂಕು) ಮತ್ತು ಚಡಚಣ (ಇಂಡಿ ತಾಲೂಕು) ಗಳಲ್ಲಿ ಉಪ ಖಜಾನೆಗಳು ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲಾ ಖಜಾನಾಧಿಕಾರಿಗಳ ಸಹಾಯಕ್ಕಾಗಿ ಇಬ್ಬರು ಸಹಾಯಕ ನಿರ್ದೇಶಕರು, ಇಬ್ಬರು ಮುಖ್ಯ ಲೆಕ್ಕಪಾಲಕರು, ಹದಿನೇಳು ಪ್ರಥಮ ದರ್ಜೆ ಸಹಾಯಕರು, ಇಪ್ಪತ್ತೈದು ದ್ವಿತೀಯ ದರ್ಜೆ ಸಹಾಯಕರು, ಓರ್ವ ನಗದಿಗ (ಕ್ಯಾಷಿಯರ್) ಮತ್ತಿತರ ಸಿಬ್ಬಂದಿವರ್ಗದವರಿರುತ್ತಾರೆ. ಜಿಲ್ಲಾ ವ್ಯಾಪ್ತಿಗೆ ಒಳಪಟ್ಟ ಎಲ್ಲಾ ಸರಕಾರಿ ಕಛೇರಿಗಳ ವಿವಿಧ ನಮೂನೆಯ ಬಿಲ್ಲುಗಳನ್ನು ಮಹಾಲೇಖಪಾಲಕರು, ಬೆಂಗಳೂರು, ಇವರ ಪ್ರಮಾಣೀಕರಣಕ್ಕೆ ಅನುಗುಣವಾಗಿ ಖಜಾನೆ ತಪಾಸಣೆಗೆ ಒಳಪಡಿಸಿ ಪಾವತಿ ಮಾಡುವುದು, ವಿವಿಧ ರೀತಿಯ ಪಿಂಚಣಿಗಳನ್ನು ಪಾವತಿ ಮಾಡುವುದು ಹಾಗೂ ವೈಯಕ್ತಿಕ ಠೇವಣಿಗಳ ನಿರ್ವಹಣೆ ಇವೇ ಮೊದಲಾದುವು ಜಿಲ್ಲಾ ಖಜನಾಧಿಕಾರಿಗಳ ಪ್ರಮುಖ ಕಾರ್ಯ ಚಟುವಟಿಕೆಗಳಾಗಿವೆ.

## ಗೃಹರಕ್ಷಕದಳ ಸಮಾದೇಷ್ಟರ ಕಛೇರಿ

ವಿಜಾಪುರದಲ್ಲಿ ಗೃಹರಕ್ಷಕದಳ ಸಮಾದೇಷ್ಟರ ಕಛೇರಿಯು ೧೯೪೭ರಲ್ಲಿ ಅಂದಿನ ಬೃಹತ್ ಮುಂಬಯಿ ರಾಜ್ಯದ ವ್ಯಾಪ್ತಿಯಲ್ಲಿ ಆರಂಭವಾಗಿದ್ದು ನಂತರದಲ್ಲಿ ಕರ್ನಾಟಕ ರಾಜ್ಯದ ವ್ಯಾಪ್ತಿಗೆ ಒಳಪಟ್ಟಿತು. ಸಮಾದೇಷ್ಟರು, ಗೃಹರಕ್ಷಕ ದಳ, ವಿಜಾಪುರ ಜಿಲ್ಲೆ, ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಇವರ ಅಧೀನದಲ್ಲಿ ಓರ್ವ ಅಧೀಕ್ಷಕರು, ಇಬ್ಬರು ಪ್ರಥಮ

ದರ್ಜೆ ಸಹಾಯಕರು, ಇಬ್ಬರು ದ್ವಿತೀಯ ದರ್ಜೆ ಸಹಾಯಕರು, ಓರ್ವ ಬೆರಳಚ್ಚುಗಾರರೂ, ಓರ್ವ ಬೋಧಕರೂ, ಇಬ್ಬರು ಸಹಾಯಕ ಬೋಧಕರೂ ಸೇರಿದಂತೆ ಒಟ್ಟಾರೆ ೧೩ ಮಂದಿ ಸಿಬ್ಬಂದಿ ವರ್ಗದವರಿರುತ್ತಾರೆ. ಸಮಾದೇಷ್ಟರ ನೆರವಿಗಾಗಿ ೧೯೮೮ ರಿಂದ ಓರ್ವ ಉಪ ಸಮಾದೇಷ್ಟರೂ ಇರುತ್ತಾರೆ. ಕಾನೂನು ಮತ್ತು ಶಾಂತಿ ಪಾಲನೆಯನ್ನು ಕಾಪಾಡುವಲ್ಲಿ ಆರಕ್ಷಕರೊಂದಿಗೆ ಸಹಕರಿಸುವುದು ಈ ಕಛೇರಿಯ ಜವಾಬ್ದಾರಿಯಾಗಿರುತ್ತದೆ. ಈ ಕಛೇರಿಯ ಅಧೀನದಲ್ಲಿ ಜಿಲ್ಲೆಯ ವಿವಿಧ ೩೦ ಸ್ಥಳಗಳಲ್ಲಿ ಗೌರವ ಘಟಕಾಧಿಕಾರಿಗಳು ಕಾರ್ಯನಿರ್ವಹಿಸುತ್ತಿರುವರು. ಬೆಂಗಳೂರಿನಲ್ಲಿರುವ ಆರಕ್ಷಕ ಮಹಾ ನಿರ್ದೇಶಕರು ಮತ್ತು ಗೃಹ ರಕ್ಷಕದಳದ ಮಹಾ ಸಮಾದೇಷ್ಟರು ಇದರ ಮೇಲಾಧಿಕಾರಿಗಳಾಗಿರುತ್ತಾರೆ.

### ಜಿಲ್ಲಾ ತರಬೇತಿ ಸಂಸ್ಥೆ

ವಿಜಾಪುರ ಜಿಲ್ಲಾ ತರಬೇತಿ ಸಂಸ್ಥೆಯು ೧೯೭೬ ರಲ್ಲಿ ಜಮಖಂಡಿಯಲ್ಲಿ ಪ್ರಾರಂಭವಾಗಿ, ಅದೇ ವರ್ಷದಲ್ಲಿ ಆಲಮಟ್ಟಿಗೆ ಸ್ಥಳಾಂತರಿಸಲ್ಪಟ್ಟು ನಂತರ ೧೯೭೬ ರಲ್ಲಿಯೇ ವಿಜಾಪುರಕ್ಕೆ ವರ್ಗಾವಣೆ ಮಾಡಲಾಯಿತು. ಪ್ರಾಚಾರ್ಯರು ಈ ಸಂಸ್ಥೆಯ ಮುಖ್ಯಸ್ಥರಾಗಿದ್ದು ಇವರ ಕಾರ್ಯವ್ಯಾಪ್ತಿಯು ಇಡೀ ಜಿಲ್ಲೆಗೆ ಸೀಮಿತವಾಗಿದೆ. ಆಡಳಿತದಲ್ಲಿ ಸುಧಾರಣೆ ತರುವ ಉದ್ದೇಶದಿಂದ ಸರ್ಕಾರದ ಅಭಿವೃದ್ಧಿಗಳ ಹಾಗೂ ಸಾರ್ವಜನಿಕ ಕುಂದುಕೊರತೆಗಳನ್ನು ನಿವಾರಿಸಲು ಸೂಕ್ತ ಮಾರ್ಗದರ್ಶನ ನೀಡುವ ಸಲುವಾಗಿ ಆರ್ಥಿಕ ವಿಷಯಗಳ ಬಗ್ಗೆ ತಿಳುವಳಿಕೆ ಮತ್ತು ಲೆಕ್ಕ ಪತ್ರಗಳ ಕುರಿತು, ಹೊಸ ಹೊಸ ಕಾಯ್ದೆಯ, ನಿಯಮಗಳ ಹಾಗೂ ಅವುಗಳ ತಿದ್ದುಪಡಿಗಳ ಬಗ್ಗೆ ಮಾಹಿತಿಯನ್ನು ನೀಡುವ ಸಲುವಾಗಿ, ಆಡಳಿತ ತರಬೇತಿ ಸಂಸ್ಥೆ ಮೈಸೂರು ಇವರ ಮಾರ್ಗದರ್ಶನದಲ್ಲಿ ಜಿಲ್ಲೆಯ ಎಲ್ಲಾ ಸರಕಾರಿ ಕಾರ್ಯಾಲಯಗಳಲ್ಲಿನ ನೌಕರರಿಗೆ ತರಬೇತಿಯನ್ನು ನೀಡುವುದು ಹಾಗೂ ಅಧಿಕಾರೇತರ ಸದಸ್ಯರಿಗೆ ಅಂದರೆ ಗ್ರಾಮ ಪಂಚಾಯಿತಿ ಸದಸ್ಯರಿಗೆ, ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಸದಸ್ಯರಿಗೆ ಮತ್ತು ಅಧಿಕಾರೇತರ ಸಂಘ ಸಂಸ್ಥೆಗಳ ಸದಸ್ಯರಿಗೆ ತರಬೇತಿಯನ್ನು ನೀಡುವುದು ಇದರ ಪ್ರಮುಖ ಉದ್ದೇಶಗಳಾಗಿವೆ. ಅಲ್ಲದೆ ದೂರದರ್ಶನದ ಮೂಲಕ ಕಲಿಕಾ ತರಬೇತಿಯನ್ನೂ ಸಹ ನೀಡಲಾಗುತ್ತಿದೆ. ಪ್ರಾಚಾರ್ಯರ ನೆರವಿಗಾಗಿ ಓರ್ವ ಉಪ ಪ್ರಾಚಾರ್ಯರೂ, ಇಬ್ಬರು ಬೋಧಕರೂ, ಓರ್ವ ಪ್ರಥಮ ದರ್ಜೆ ಸಹಾಯಕರೂ, ಓರ್ವ ದ್ವಿತೀಯ ದರ್ಜೆ ಸಹಾಯಕರೂ, ಇಬ್ಬರು ಬೆರಳಚ್ಚುಗಾರರೂ ಮತ್ತಿತರ ಸಿಬ್ಬಂದಿ ವರ್ಗದವರೂ ಕಾರ್ಯನಿರ್ವಹಿಸುತ್ತಿರುವರು. ತರಬೇತಿದಾರರ ವಾಸ್ತವ್ಯಕ್ಕಾಗಿ ಸಂಸ್ಥೆಯ ಆಡಳಿತ ಕಛೇರಿಯಲ್ಲಿ ವಸತಿ ಗೃಹದ ವ್ಯವಸ್ಥೆಯನ್ನೂ ಸಹ ಮಾಡಲಾಗಿದೆ. ಮೈಸೂರಿನಲ್ಲಿರುವ ಆಡಳಿತ ತರಬೇತಿ ಸಂಸ್ಥೆಯ ಮಹಾ ನಿರ್ದೇಶಕರು ಈ ಸಂಸ್ಥೆಯ ಮೇಲಾಧಿಕಾರಿಗಳಾಗಿರುತ್ತಾರೆ.

### ನಗರ ಯೋಜನಾ ಇಲಾಖೆ

ನಗರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿಯು ೧೯೭೦ರಲ್ಲಿ ವಿಜಾಪುರದಲ್ಲಿ ಆರಂಭವಾಯಿತು. ಆರಂಭದಲ್ಲಿ ಇದರ ಕಾರ್ಯವ್ಯಾಪ್ತಿಯು ಎಲ್ಲಾ ತಾಲೂಕುಗಳನ್ನೊಳಗೊಂಡಿದ್ದು ೧೯೮೨ರಲ್ಲಿ ಬಾಗಲಕೋಟೆಯಲ್ಲಿ ಮತ್ತೊಂದು ನಗರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿಯು ಆರಂಭವಾಗಿ ಇದರ ಅಧಿಕಾರ ವ್ಯಾಪ್ತಿಗೆ ಬಾಗಲಕೋಟೆ, ಬಾದಾಮಿ, ಹುನಗುಂದ, ಮುಧೋಳ ಮತ್ತು ಬೀಳಗಿ ತಾಲೂಕುಗಳನ್ನು ಸೇರಿಸಲಾಯಿತು. ಜಮಖಂಡಿಯಲ್ಲಿ ೧೯೯೩ ರಲ್ಲಿ ಮತ್ತೊಂದು ನಗರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿಯು ಆರಂಭವಾಗಿ ಇದರ ಅಧಿಕಾರ ವ್ಯಾಪ್ತಿಗೆ ಜಮಖಂಡಿ ಮತ್ತು ಮುಧೋಳ ತಾಲೂಕುಗಳನ್ನು ಸೇರಿಸಲಾಯಿತು. ಇದರಿಂದ ಈ ಕಛೇರಿಯ ವ್ಯಾಪ್ತಿಗೆ ವಿಜಾಪುರ, ಬಸವನಬಾಗೇವಾಡಿ, ಇಂಡಿ, ಸಿಂದಗಿ ಮತ್ತು ಮುದ್ದೇಬಿಹಾಳ ತಾಲೂಕುಗಳು ಮಾತ್ರ ಒಳಗೊಂಡಿರುತ್ತವೆ. ಜಿಲ್ಲೆಯ ತಾಲೂಕು ಕೇಂದ್ರಗಳ, ಪಟ್ಟಣಗಳ ಮತ್ತು ಹಳ್ಳಿಗಳ ಯೋಜಣೆ ಕಾರ್ಯಕ್ರಮವನ್ನು ಕೈಗೊಂಡು ಮೂಲ

ನಕ್ಷೆಗಳನ್ನು ತಯಾರಿಸುವುದು, ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದು ಹಾಗೂ ವಿಜಾಪುರ ಮತ್ತು ಬಾಗಲಕೋಟೆ ನಗರಗಳಿಗೆ ಸ್ಥೂಲಾಭಿವೃದ್ಧಿ ಯೋಜನೆಗಳನ್ನು ಮತ್ತು ವ್ಯಾಪಕಾಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದು, ಸ್ಥಳೀಯ ಸಂಸ್ಥೆಗಳಾದ ನಗರಸಭೆಗಳು, ಪುರಸಭೆಗಳು, ಪಂಚಾಯಿತಿಗಳು, ಕಂದಾಯ ಇಲಾಖೆ ಮತ್ತು ಇನ್ನಿತರ ಇಲಾಖೆಗಳಿಗೆ ತಾಂತ್ರಿಕ ಹಾಗೂ ಯೋಜನಾ ವಿಷಯಗಳಲ್ಲಿ ನೆರವು ನೀಡುವುದು ಈ ಕಛೇರಿಗಳ ಮುಖ್ಯ ಕಾರ್ಯ ಚಟುವಟಿಕೆಗಳಾಗಿವೆ. ನಗರ ಯೋಜನಾ ಸಹಾಯಕ ನಿರ್ದೇಶಕರ ನೆರವಿಗಾಗಿ ಇಬ್ಬರು ಕಿರಿಯ ನಗರ ಯೋಜಕರು, ಐದು ಜನ ನಗರ ಯೋಜನಾಪರ್ಯವೇಕ್ಷಕರು, ಒಬ್ಬ ಆಕೃತಿ ರಚಕರು, ಒಬ್ಬ ಅನುರೇಖಕರು ಮತ್ತಿತರ ಸಿಬ್ಬಂದಿವರ್ಗದವರೂ ಸೇರಿದಂತೆ ಒಟ್ಟಾರೆ ೧೬ ಮಂದಿ ಸಿಬ್ಬಂದಿವರ್ಗದವರಿರುತ್ತಾರೆ. ಧಾರಾವಾಡದಲ್ಲಿರುವ ವಲಯ ಕಛೇರಿಯ ನಗರ ಯೋಜನಾ ಜಂಟಿ ನಿರ್ದೇಶಕರು ಈ ಕಛೇರಿಯ ತಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

## ಪ್ರಾದೇಶಿಕ ಸಾರಿಗೆ ಇಲಾಖೆ

ವಿಜಾಪುರದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯು ಜನವರಿ ೧೯೫೬ ರಿಂದ ಕಾರ್ಯನಿರ್ವಹಿಸುತ್ತಿದ್ದು ಆರಂಭದಲ್ಲಿ ಇದರ ಕಾರ್ಯವ್ಯಾಪ್ತಿಯು ಜಿಲ್ಲೆಯ ಎಲ್ಲಾ ೧೧ ತಾಲೂಕುಗಳಿಗೂ ಒಳಪಟ್ಟಿತ್ತು. ಬಾಗಲಕೋಟೆಯಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯು ೧೯೮೨ರಲ್ಲಿ ಆರಂಭವಾದ ನಂತರ ಈ ಕಛೇರಿಯ ವ್ಯಾಪ್ತಿಯು ವಿಜಾಪುರ, ಇಂಡಿ, ಸಿಂದಗಿ, ಬಸವನ ಬಾಗೇವಾಡಿ ಮತ್ತು ಜಮಖಂಡಿ ತಾಲೂಕುಗಳಿಗೆ ಸೀಮಿತವಾಗಿದ್ದು ಉಳಿದ ತಾಲೂಕುಗಳು ಬಾಗಲಕೋಟೆಯಲ್ಲಿರುವ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ವಾಹನಗಳ ನೋಂದಣಿ, ರಹದಾರಿ ಮತ್ತು ಚಾಲನಾಪತ್ರ ನೀಡುವುದು ಹಾಗೂ ವಿವಿಧ ನಿಯಮಗಳಡಿಯಲ್ಲಿ ವಾಹನಗಳ ತಪಾಸಣೆ ನಡೆಸುವುದೂ ಇವೇ ಮೊದಲಾದುವು ಈ ಕಛೇರಿಯ ಪ್ರಮುಖ ಕಾರ್ಯಚಟುವಟಿಕೆಗಳಾಗಿರುತ್ತವೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ನೆರವಿಗಾಗಿ ಕಛೇರಿಯಲ್ಲಿ ಒಬ್ಬ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ೧೫ ಹಿರಿಯ ಮೋಟಾರು ವಾಹನ ನಿರೀಕ್ಷಕರು, ೯ ಮೋಟಾರು ವಾಹನ ನಿರೀಕ್ಷಕರು, ಮೂವರು ಅಧೀಕ್ಷಕರು, ಒಬ್ಬ ಲೆಕ್ಕಅಧೀಕ್ಷಕರು ಮತ್ತಿತರ ಸಿಬ್ಬಂದಿಗಳೂ ಸೇರಿದಂತೆ ಒಟ್ಟು ೬೨ ಜನ ಸಿಬ್ಬಂದಿ ವರ್ಗದವರಿರುತ್ತಾರೆ. ಈ ಕಛೇರಿಯ ಅಧೀನದಲ್ಲಿ ಝುಳಕಿಯಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯು ಕಾರ್ಯ ನಿರ್ವಹಿಸುತ್ತಿದೆ. ಈ ಕಚೇರಿಯು ಬೆಳಗಾವಿ ವಿಭಾಗದ ಉಪಸಾರಿಗೆ ಆಯುಕ್ತರ ಕಚೇರಿಯ ನಿಯಂತ್ರಣದಲ್ಲಿದೆ.

## ಭೂಸಾರ ಸಂರಕ್ಷಣಾ ತರಬೇತಿ ಕೇಂದ್ರ

ವಿಜಾಪುರದಲ್ಲಿ ಭೂಸಾರ ಸಂರಕ್ಷಣಾ ತರಬೇತಿ ಕೇಂದ್ರವು ೧೯೫೪ರಲ್ಲಿ ಆರಂಭವಾಗಿದ್ದು, ಪ್ರಾಚಾರ್ಯರು ಇದರ ಮುಖ್ಯಸ್ಥರಾಗಿರುತ್ತಾರೆ. ಮುಖ್ಯಾಧಿಕಾರಿಗಳ ಹುದ್ದೆಯ ಪದನಾಮವನ್ನು ೧೯೭೧ ರಲ್ಲಿ ಸಹಾಯಕ ಕೃಷಿ ನಿರ್ದೇಶಕರು (ಪ್ರಾಚಾರ್ಯರು, ಭೂಸಾರ ಸಂರಕ್ಷಣೆ ತರಬೇತಿ) ಎಂದು ಪರಿವರ್ತಿಸಲಾಯಿತು. ಈ ತರಬೇತಿ ಕೇಂದ್ರದ ಕಾರ್ಯ ವ್ಯಾಪ್ತಿಯು ರಾಜ್ಯ ಮಟ್ಟದ್ದಾಗಿದ್ದು, ಕೃಷಿ ಇಲಾಖೆಯಲ್ಲಿ ಕೆಲಸ ನಿರ್ವಹಿಸುವ ಕೃಷಿ ಸಹಾಯಕರಿಗೆ ಮಣ್ಣು ಮತ್ತು ನೀರು ಸಂರಕ್ಷಣೆ, ಒಣ ಬೇಸಾಯ ಅಭಿವೃದ್ಧಿ, ಜಲಾನಯನ ನಿರ್ವಹಣೆ, ನಾಲಾ ಬಂಡಿಂಗ್, ಚೆಕ್‌ಡ್ಯಾಮ್, ಕೊಳ್ಳಸುಧಾರಣೆ, ಕೊರಕಲು ತಡೆಗಳು ಮುಂತಾದ ನೀರು ಹರಿಯುವ ಮಾರ್ಗಗಳ ಉಪಚಾರದ ಬಗ್ಗೆ ಮೂರು ತಿಂಗಳ ಅವಧಿಯ ನಿಯತಕಾಲಿಕ ತರಬೇತಿಯನ್ನು ಹಾಗೂ ಅಧಿಕಾರಿಗಳಿಗೆ ೧೦ ದಿನಗಳ ಅಲ್ಪಾವಧಿ ತರಬೇತಿಗಳನ್ನು ನೀಡಲಾಗುತ್ತಿದೆ. ಅಲ್ಲದೆ ಇಲಾಖೆಯಿಂದ ನಿಗದಿಪಡಿಸಿದ ವಿಶೇಷ ತರಬೇತಿಗಳನ್ನೂ ಸಹ ಏರ್ಪಡಿಸಲಾಗುತ್ತದೆ. ಪ್ರಾಚಾರ್ಯರ ನೆರವಿಗಾಗಿ, ತರಬೇತಿ

ಕೇಂದ್ರದಲ್ಲಿ ಮೂವರು ಸಹಾಯಕ ಕೃಷಿ ಅಧಿಕಾರಿಗಳು, ಓರ್ವ ಅಧೀಕ್ಷಕರು, ಓರ್ವ ನಕ್ಷೆಗಾರರು ಮತ್ತಿತರ ಸಿಬ್ಬಂದಿವರ್ಗದವರಿರುತ್ತಾರೆ. ಬೆಂಗಳೂರಿನಲ್ಲಿರುವ ಕೃಷಿ ನಿರ್ದೇಶನಾಲಯದ ಅಪರ ಕೃಷಿ ನಿರ್ದೇಶಕರು (ಭೂಸಾರ ಸಂರಕ್ಷಣೆ) ಇವರು ತರಬೇತಿ ಕೇಂದ್ರದ ಮೇಲಾಧಿಕಾರಿಗಳಾಗಿರುತ್ತಾರೆ.

## ಮೀನುಗಾರಿಕೆ ಇಲಾಖೆ

ವಿಜಾಪುರದಲ್ಲಿ ಮೀನುಗಾರಿಕೆ ಸಹಾಯಕ ಅಧೀಕ್ಷಕರ ಕಛೇರಿಯು ೧೯೬೦ರಲ್ಲಿ ಆರಂಭವಾಗಿದ್ದು ೧೯೭೫ರಲ್ಲಿ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿಯಾಗಿಯೂ ಮತ್ತು ೧೯೮೦ರಲ್ಲಿ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿಯಾಗಿಯೂ ಬದಲಾವಣೆಯಾಯಿತು. ಜಿಲ್ಲೆಯಲ್ಲಿರುವ ಸಣ್ಣ ಹಾಗೂ ದೊಡ್ಡ ಕೆರೆಗಳನ್ನು ಗುತ್ತಿಗೆ ಹಾಗೂ ಹರಾಜು ಮುಖಾಂತರ ಮೀನುಗಾರಿಕೆ ಸಹಕಾರ ಸಂಘಗಳಿಗೆ ನೀಡುವುದು, ಕೆರೆ ಹಾಗೂ ನದಿಗಳಲ್ಲಿ ಮೀನು ಮರಿಗಳನ್ನು ಸಂಗ್ರಹಿಸುವುದು, ಮೀನುಗಾರಿಕೆ ಬಗ್ಗೆ ತಾಂತ್ರಿಕ ಜ್ಞಾನ ನೀಡುವುದು, ಮೀನುಮರಿಗಳನ್ನು ಸಂರಕ್ಷಣೆ ಮಾಡುವುದು ಮತ್ತು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಈ ಕಛೇರಿಯ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ. ಹಿರಿಯ ಸಹಾಯಕ ನಿರ್ದೇಶಕರ ನೆರವಿಗಾಗಿ ಓರ್ವ ಸಹಕಾರ ಸಂಘದ ಹಿರಿಯ ನಿರೀಕ್ಷಕರು, ಓರ್ವ ವಾಹನ ಚಾಲಕರು ಹಾಗೂ ಇಬ್ಬರು ಸಿಪಾಯಿಗಳು ಕಛೇರಿಯ ಸಿಬ್ಬಂದಿ ವರ್ಗದಲ್ಲಿರುತ್ತಾರೆ. ಈ ಕಛೇರಿಯ ಅಧೀನದಲ್ಲಿ ವಿಜಾಪುರ, ಜಮಖಂಡಿ, ಮುದ್ದೇಬಿಹಾಳ ಹಾಗೂ ಬಾದಾಮಿ ತಾಲೂಕುಗಳ ವ್ಯಾಪ್ತಿಗೆ ಒಳಪಟ್ಟಂತೆ ಇಲಾಖೆಯ ಜವಾಬ್ದಾರಿಯನ್ನು ನಿರ್ವಹಿಸಲು ಓರ್ವ ಮೀನುಗಾರಿಕೆ ಸಹಾಯಕ ನಿರ್ದೇಶಕರು- (ಶ್ರೇಣಿ.೨), ಕಾರ್ಯನಿರ್ವಹಿಸುತ್ತಿರುವರು. ವಿಜಾಪುರ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಬೆಂಗಳೂರಿನಲ್ಲಿರುವ ಮೀನುಗಾರಿಕೆ ನಿರ್ದೇಶಕರು ಈ ಕಛೇರಿಯ ಮೇಲಾಧಿಕಾರಿಗಳಾಗಿರುತ್ತಾರೆ.

## ರಾಜ್ಯ ಲೆಕ್ಕ ಪತ್ರ ಇಲಾಖೆ

ವಿಜಾಪುರದಲ್ಲಿ ರಾಜ್ಯಲೆಕ್ಕಪತ್ರ ಇಲಾಖೆಯ ಸ್ಥಳೀಯ ಲೆಕ್ಕಪರಿಶೋಧನಾ ವಲಯವು ಜನವರಿ ೧೯೭೭ ರಿಂದ ಕಾರ್ಯನಿರ್ವಹಿಸುತ್ತಿದ್ದು ಸಹಾಯಕ ನಿಯಂತ್ರಕರು ಇದರ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳ ಲೆಕ್ಕ ತನಿಖೆ ಕೈಗೊಳ್ಳುವುದು ಇದರ ಪ್ರಮುಖ ಉದ್ದೇಶವಾಗಿದೆ. ಇದರ ಅಧಿಕಾರ ವ್ಯಾಪ್ತಿಗೆ ನಗರ ಸಭೆಗಳು, ಪುರಸಭೆಗಳು, ಗ್ರಾಮ ಹಾಗೂ ಪಟ್ಟಣ ಪಂಚಾಯಿತಿಗಳು, ಉಚಿತ ಕಾನೂನು ನೆರವು ಸಮಿತಿಗಳು ಮತ್ತು ಜಿಲ್ಲಾ ಹಾಗೂ ನಗರ ಕೇಂದ್ರ ಗ್ರಂಥಾಲಯಗಳೂ ಒಳಪಟ್ಟಿರುತ್ತವೆ. ನಗರ ಸಭೆಗಳು, ಪುರಸಭೆಗಳು ಗ್ರಾಮ ಪಂಚಾಯಿತಿಗಳ ಮತ್ತು ಇತರ ಸ್ಥಳೀಯ ಸಂಸ್ಥೆಗಳ ತಪಾಸಣೆಯನ್ನು ಕೈಗೊಂಡು ಲೆಕ್ಕ ತನಿಖಾ ವರದಿಗಳ ಸಮೀಕ್ಷೆಯ ನಂತರ ತನಿಖಾ ವರದಿಗಳನ್ನು ಆಯಾ ಸಂಬಂಧಿಸಿದ ಸಂಸ್ಥೆಗಳಿಗೆ ಕಳುಹಿಸಿಕೊಡುವುದು ಕಛೇರಿಯ ಮುಖ್ಯ ಕಾರ್ಯಚಟುವಟಿಕೆಗಳಾಗಿವೆ. ಪುರಸಭೆಗಳ ಹಾಗೂ ಕಾನೂನು ನೆರವು ಸಮಿತಿಗಳ ಲೆಕ್ಕ ತನಿಖೆ ಕಾರ್ಯ ಕೈಗೊಳ್ಳುವುದಲ್ಲದೆ ಆಕ್ಷೇಪಣೆಗಳಿಗೆ ಸಲ್ಲಿಸಿದ ಉತ್ತರಗಳನ್ನು ಪರಿಶೀಲಿಸಿ ಒಪ್ಪಿಕೊಳ್ಳುವ ಅಧಿಕಾರವೂ ಈ ಕಛೇರಿಗೆ ಸೇರಿರುತ್ತದೆ. ಅಲ್ಲದೆ ನಗರ ಮತ್ತು ಪುರಸಭೆಗಳ ಹಾಗೂ ಪರಿವರ್ತಿತ ಪಟ್ಟಣ ಪಂಚಾಯಿತಿಗಳ ಸಿಬ್ಬಂದಿವರ್ಗದ ಪಿಂಚಣಿ ಪ್ರಾಧೀಕರಿಸುವ ಅಧಿಕಾರವನ್ನೂ ಸಹ ಈ ಕಛೇರಿಯು ಹೊಂದಿದೆ.

ಸಹಾಯಕ ನಿಯಂತ್ರಕರ ನೆರವಿಗಾಗಿ ಕಛೇರಿಯಲ್ಲಿ ಮೂವರು ಲೆಕ್ಕಪರಿಶೋಧನಾ ಅಧಿಕಾರಿಗಳು, ಓರ್ವ ಲೆಕ್ಕ ಅಧೀಕ್ಷಕರು, ೧೩ ಪ್ರಥಮ ದರ್ಜೆ ಸಹಾಯಕರು, ಓರ್ವ ದ್ವಿತೀಯ ದರ್ಜೆ ಸಹಾಯಕರು, ಇಬ್ಬರು ಬೆರಳಚ್ಚುಗಾರರು ಹಾಗೂ ಇಬ್ಬರು 'ಡಿ' ವರ್ಗದ ನೌಕರರೂ ಕಾರ್ಯನಿರ್ವಹಿಸುತ್ತಿದ್ದಾರೆ. ಬೆಂಗಳೂರಿನಲ್ಲಿರುವ ರಾಜ್ಯ ಲೆಕ್ಕ ಪತ್ರ ಇಲಾಖೆಯ ನಿಯಂತ್ರಕರು ಇವರ ಮೇಲಾಧಿಕಾರಿಗಳಾಗಿರುತ್ತಾರೆ.

## ರೇಷ್ಮೆ ಇಲಾಖೆ

ಜಿಲ್ಲೆಯಲ್ಲಿ ರೇಷ್ಮೆ ಇಲಾಖೆಯ ಉಪನಿರ್ದೇಶಕರ ಕಛೇರಿಯು ೧೯೮೦ರಲ್ಲಿ ಆರಂಭವಾಗಿದ್ದು, ಇದರ ಕಾರ್ಯ ವ್ಯಾಪ್ತಿಯು ಜಿಲ್ಲಾ ಮಟ್ಟದ್ದಾಗಿರುತ್ತದೆ. ದೇಶದಲ್ಲಿ ರೇಷ್ಮೆಯನ್ನು ರಫ್ತು ಮಾಡಲು ಅನುಕೂಲವಾಗುವಂತೆ ಕರ್ನಾಟಕ ರಾಜ್ಯದಲ್ಲಿ ಉತ್ತಮ ತಳಿಯ ಬೈವೋಲ್ಟೈನ್ ರೇಷ್ಮೆಯನ್ನು ಪ್ರಚಾರ ಪಡಿಸಲು ವಿಶ್ವ ಬ್ಯಾಂಕಿನ ನೆರವಿನ ರೇಷ್ಮೆ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿರುವುದು, ಜಿಲ್ಲೆಯಲ್ಲಿ ತಾಂತ್ರಿಕ ಸಲಹೆಗಳನ್ನು ನೀಡುವ ರೇಷ್ಮೆ ವ್ಯವಸಾಯವನ್ನು ಅಭಿವೃದ್ಧಿಗೊಳಿಸುವುದು ಮತ್ತು ಕರ್ನಾಟಕ ರೇಷ್ಮೆ ಬೀಜೋತ್ಪಾದನೆ ಕಾಯ್ದೆ ೧೯೫೧ ಹಾಗೂ ತದ ನಂತರದ ಮಾರ್ಪಾಡುಗಳನ್ನು ಹಾಗೂ ವಿವಿಧ ಯೋಜನೆಗಳಡಿಯಲ್ಲಿ ಬರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಇವು ಈ ಕಛೇರಿಯ ಪ್ರಮುಖ ಕಾರ್ಯ ಚಟುವಟಿಕೆಗಳಾಗಿವೆ. ಆಡಳಿತ ದೃಷ್ಟಿಯಿಂದ ಈ ಕಛೇರಿಯ ಅಧೀನದಲ್ಲಿ ರೇಷ್ಮೆ ಸಹಾಯಕ ನಿರ್ದೇಶಕರು, ಜಮಖಂಡಿ ವಿಭಾಗ, ಜಮಖಂಡಿ ಮತ್ತು ರೇಷ್ಮೆ ಸಹಾಯಕ ನಿರ್ದೇಶಕರು, ವಿಜಾಪುರ ವಿಭಾಗ, ವಿಜಾಪುರ ಇವರುಗಳು ಕಾರ್ಯ ನಿರ್ವಹಿಸುತ್ತಿರುವರು. ಜಮಖಂಡಿ ವಿಭಾಗದ ಮೇಲ್ವಿಚಾರಣೆಯಲ್ಲಿ ಜಮಖಂಡಿ, ಮಹಾಲಿಂಗಪುರ, ಬಾಗಲಕೋಟೆ, ಹುನಗುಂದ ಮತ್ತು ಬಾದಾಮಿಗಳಲ್ಲಿ ಹಾಗೂ ವಿಜಾಪುರ ವಿಭಾಗದ ಮೇಲ್ವಿಚಾರಣೆಯಲ್ಲಿ ವಿಜಾಪುರ, ಸಿಂಧಗಿ, ಬಸವನ ಬಾಗೇವಾಡಿ ಮತ್ತು ಇಂಡಿಯಲ್ಲಿ ತಾಂತ್ರಿಕ ಸೇವಾಕೇಂದ್ರಗಳು, ರೇಷ್ಮೆ ವಿಸ್ತರಣಾಧಿಕಾರಿಗಳ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇವಲ್ಲದೆ ಜಿಲ್ಲೆಯಾದ್ಯಾಂತ ೭೦ ಚಾಕಿ ಸಾಕಾಣಿಕೆ ಕೇಂದ್ರಗಳೂ, ಬಾಗಲಕೋಟೆ, ಸಿಂಧಗಿ ಮತ್ತು ನವರಸಪುರದಲ್ಲಿ ರೇಷ್ಮೆ ಕೃಷಿ ಕ್ಷೇತ್ರಗಳೂ, ವಿಜಾಪುರದಲ್ಲಿ ಒಂದು ರೇಷ್ಮೆ ಬಿತ್ತನೆ ಕೋಠಿಯೂ, ವಿಜಾಪುರ, ಮುಧೋಳ ಮತ್ತು ಜಮಖಂಡಿಯಲ್ಲಿ ರೇಷ್ಮೆ ಗೂಡು ಮಾರುಕಟ್ಟೆಗಳೂ, ವಿಜಾಪುರ ಮತ್ತು ಜಮಖಂಡಿಯಲ್ಲಿ ರೇಷ್ಮೆಗೂಡು ಬಿಚ್ಚಾಣಿಕೆ ಕಿರು ಘಟಕಗಳೂ, ವಿಜಾಪುರದಲ್ಲಿ ರೇಷ್ಮೆ ನೂಲು ಬಿಚ್ಚಾಣಿಕೆ ತರಬೇತಿ ಹಾಗೂ ಉತ್ಪಾದನಾ ಕೇಂದ್ರವೂ, ಜಮಖಂಡಿ ಮತ್ತು ಮುಧೋಳದಲ್ಲಿ ರೇಷ್ಮೆ ನೂಲು ಬಿಚ್ಚಾಣಿಕೆ ಸಂಕೀರ್ಣಗಳೂ, ನವರಸಪುರ ಮತ್ತು ಜಮಖಂಡಿಯಲ್ಲಿ ರೇಷ್ಮೆ ಬೆಳವಣಿಗೆ ಕೇಂದ್ರಗಳೂ, ಜಮಖಂಡಿಯಲ್ಲಿ ಮಹಿಳಾ ಪ್ರಾತ್ಯಕ್ಷತೆ ಕ್ಷೇತ್ರವೂ, ಮಹಾಲಿಂಗಪುರದಲ್ಲಿ ಮಾದರಿ ಚಾಕಿ ಸಾಕಾಣಿಕಾ ಕೇಂದ್ರವೂ, ಮಾವಿನಹಳ್ಳಿಯಲ್ಲಿ ಸಮುದಾಯ ಅಭಿವೃದ್ಧಿ ಕೇಂದ್ರವೂ, ಮತ್ತು ಗುಳೇದಗುಡ್ಡದಲ್ಲಿ ರೇಷ್ಮೆ ವಿನಿಮಯ ಕೇಂದ್ರವೂ ಇವೆ. ಉಪ ನಿರ್ದೇಶಕರ ನೆರವಿಗಾಗಿ ಇಬ್ಬರು ಸಹಾಯಕ ನಿರ್ದೇಶಕರು, ಐವರು ರೇಷ್ಮೆ ವಿಸ್ತೀರ್ಣಾಧಿಕಾರಿಗಳು, ಓರ್ವ ಪತ್ರಾಂಕಿತ ವ್ಯವಸ್ಥಾಪಕರು, ಇಬ್ಬರು ಹಿರಿಯ ರೇಷ್ಮೆ ನಿರೀಕ್ಷಕರೂ, ಏಳು ರೇಷ್ಮೆ ನಿರೀಕ್ಷಕರೂ, ಮತ್ತು ೭೮ ರೇಷ್ಮೆ ಪ್ರದರ್ಶಕರೂ ಇದ್ದು ಒಟ್ಟು ೧೩೩ ಮಂದಿ ಸಿಬ್ಬಂದಿವರ್ಗದವರಿರುತ್ತಾರೆ. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇವರ ಮೇಲಾಧಿಕಾರಿಗಳಾಗಿರುತ್ತಾರೆ.

## ಲೋಕ ಶಿಕ್ಷಣ ಇಲಾಖೆ

ವಿಜಾಪುರದಲ್ಲಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿಯು ೧೯೭೭ರಲ್ಲಿ ಆರಂಭವಾಗಿದ್ದು ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು ಇದರ ಮುಖ್ಯಸ್ಥರಾಗಿರುತ್ತಾರೆ. ಅನಕ್ಷರತೆಯ ನಿವಾರಣೆ, ಜನಶಿಕ್ಷಣ ನಿಲಯಗಳ ಸ್ಥಾಪನೆ ಹಾಗೂ ನಿಯಂತ್ರಣ, ಗ್ರಾಮೀಣ ಜನತೆಗೆ ಪೂರಕ ವಸ್ತುಗಳನ್ನು ಓದಲು ಗ್ರಂಥಾಲಯಗಳಂತೆ ಕಾರ್ಯನಿರ್ವಹಿಸುವುದು, ಗ್ರಾಮೀಣ ಜನರಲ್ಲಿ ಆರೋಗ್ಯ, ಪರಿಸರ ಪ್ರಜ್ಞೆ, ಕೋಮಲ ಸೌಹಾರ್ದತೆ, ರಾಷ್ಟ್ರೀಯ ಪ್ರಜ್ಞೆ ಮುಂತಾದ ಗುಣಗಳನ್ನು ಜಾಗೃತಗೊಳಿಸುವುದು, ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವ ಜನರಿಗೆ ವಾರ್ತಾ ಪತ್ರಿಕೆ ಮತ್ತು ಪುಸ್ತಕಗಳನ್ನು ಒದಗಿಸುವುದು ಹಾಗೂ ಚರ್ಚಾಗೋಷ್ಠಿ ಮತ್ತು ಜಾನಪದ ಕ್ರೀಡೆಗಳು, ಹಾಡುಗಳು, ಬಯಲಾಟ, ಬೀದಿನಾಟಕ ಇವೇ

ಮೊದಲಾದ ಸಾಂಸ್ಕೃತಿಕ ಮನರಂಜನಾ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಕಛೇರಿಯ ಪ್ರಮುಖ ಕಾರ್ಯ ಚಟುವಟಿಕೆಗಳಾಗಿವೆ. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ನೆರವಿಗಾಗಿ ಓರ್ವ ಸಹಾಯಕ ಸಾಂಖ್ಯಿಕ ಅಧಿಕಾರಿಗಳು, ಓರ್ವ ಕಾರ್ಯಕ್ರಮ ಸಹಾಯಕರು, ಓರ್ವ ಪ್ರಥಮ ದರ್ಜೆ ಸಹಾಯಕರು ಹಾಗೂ ಓರ್ವ ದಲಾಯತರು ಇರುವರು. ಬೆಂಗಳೂರಿನಲ್ಲಿರುವ ಲೋಕ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು ಈ ಕಛೇರಿಯ ಮೇಲಾಧಿಕಾರಿಗಳಾಗಿರುತ್ತಾರೆ. (ವಿವರಗಳಿಗೆ ೧೩ ನೇ ಅಧ್ಯಾಯವನ್ನು ನೋಡಿರಿ).

### ಸಣ್ಣ ಉಳಿತಾಯ ಇಲಾಖೆ

ಜಿಲ್ಲೆಯ ಸಣ್ಣ ಉಳಿತಾಯ ಇಲಾಖೆಯ ಸಹಾಯಕ ನಿರ್ದೇಶಕರ ಕಾರ್ಯಾಲಯವು ೧೯೮೨ರಲ್ಲಿ ಅಸ್ತಿತ್ವಕ್ಕೆ ಬಂದಿತು. ಜಿಲ್ಲೆಯಾದ್ಯಂತ ಸಣ್ಣ ಉಳಿತಾಯ ಸಂಗ್ರಹಣೆಗೆ ಪ್ರೋತ್ಸಾಹಿಸುವುದು, ವಿವಿಧ ಇಲಾಖೆಗಳ ಸಣ್ಣ ಉಳಿತಾಯ ಸಂಗ್ರಹಣೆ ಪ್ರಗತಿಯನ್ನು ಪರಿಶೀಲಿಸುವುದು, ಸಣ್ಣ ಉಳಿತಾಯ ಯೋಜನೆಯನ್ನು ಪ್ರೋತ್ಸಾಹಿಸುವ ಇತರ ಉಪಯೋಜನೆಗಳ ಅನುಷ್ಠಾನ ಕೈಗೊಳ್ಳುವುದು ಹಾಗೂ ಅಧಿಕೃತ ಪ್ರತಿನಿಧಿಗಳನ್ನು ನೇಮಕಾತಿ ಮಾಡುವುದು ಈ ಕಛೇರಿಯ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ. ಇದರ ಕಾರ್ಯ ವ್ಯಾಪ್ತಿಯು ಜಿಲ್ಲಾ ಮಟ್ಟದ್ದಾಗಿದ್ದು ಇವರ ನೆರವಿಗಾಗಿ ವಿಜಾಪುರ ಮತ್ತು ಬಾಗಲಕೋಟೆಯಲ್ಲಿ ಅಭಿವೃದ್ಧಿ ಅಧಿಕಾರಿಗಳೂ ಉಳಿದ ತಾಲೂಕುಗಳಲ್ಲಿ ಸಹಾಯಕ ಅಭಿವೃದ್ಧಿ ಅಧಿಕಾರಿಗಳೂ ಮತ್ತಿತರ ಸಿಬ್ಬಂದಿವರ್ಗದವರಿರುತ್ತಾರೆ.

### ಸಹಕಾರ ಇಲಾಖೆ

ವಿಜಾಪುರದಲ್ಲಿ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಯು ೧೯೬೬ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು ಇದರ ಕಾರ್ಯವ್ಯಾಪ್ತಿಯು ಜಿಲ್ಲಾ ಮಟ್ಟದ್ದಾಗಿರುತ್ತದೆ. ಸಹಕಾರಿ ಕಾಯ್ದೆ ೧೯೫೯ ಹಾಗೂ ನಿಯಮ ೧೯೬೦ರ ಅನ್ವಯ ಸಹಕಾರ ಸಂಘಗಳ ರಚನೆ ಹಾಗೂ ಕಾರ್ಯನಿರ್ವಹಣೆ ಪರಿಶೀಲನೆ, ಲೇವಾದೇವಿ, ಗಿರವಿ ನೋಂದಾಯಿಸುವುದು ಹಾಗೂ ಅವುಗಳ ನಿಯಂತ್ರಣ, ವ್ಯವಸಾಯ ಚಟುವಟಿಕೆಗೆ ಸಂಬಂಧಿಸಿದಂತೆ ಸಾಲ ವಿತರಣೆ ಹಾಗೂ ವಸೂಲಾತಿ, ಸಹಕಾರಿ ಸಂಘಗಳ ವ್ಯಾಜ್ಯಗಳನ್ನು ಇತ್ಯರ್ಥಗೊಳಿಸುವುದು ಇವೇ ಮೊದಲಾದುವು ಈ ಕಛೇರಿಯ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ. ಉಪ ನಿಬಂಧಕರ ನೆರವಿಗಾಗಿ ಈ ಕಛೇರಿಯಲ್ಲಿ ಸಹಕಾರಿ ಅಭಿವೃದ್ಧಿ ಅಧಿಕಾರಿಗಳು, ಅಧೀಕ್ಷಕರು, ಹಿರಿಯ ನಿರೀಕ್ಷಕರು ಮತ್ತಿತರ ಸಿಬ್ಬಂದಿ ವರ್ಗದವರು ಇರುತ್ತಾರೆ. ತಾಲೂಕು ಮಟ್ಟದಲ್ಲಿ ಈ ಕಛೇರಿಯ ಅಧೀನದಲ್ಲಿ ಸಹಾಯಕ ನಿಬಂಧಕರ ಕಛೇರಿಯಾಗಲೀ ಇಲ್ಲವೇ ಸಹಕಾರಿ ಅಭಿವೃದ್ಧಿ ಅಧಿಕಾರಿಗಳ ಕಛೇರಿಯಾಗಲೀ ಕಾರ್ಯನಿರ್ವಹಿಸುತ್ತಿವೆ. ಬಾಗಲಕೋಟೆ ಜಿಲ್ಲೆಯಾದ ನಂತರ ಸೆಪ್ಟೆಂಬರ್ ೧೯೯೭ರಿಂದ ಬಾಗಲಕೋಟೆಯಲ್ಲಿಯೂ ಸಹ ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿಯು ಆರಂಭವಾಗಿದೆ. ಈ ಕಛೇರಿಯಲ್ಲಿ ಉಪ ನಿಬಂಧಕರ ನೆರವಿಗಾಗಿ ಓರ್ವ ಸಹಕಾರ ಅಭಿವೃದ್ಧಿ ಅಧಿಕಾರಿ, ಓರ್ವ ಅಧೀಕ್ಷಕರು, ಇಬ್ಬರು ಹಿರಿಯ ನಿರೀಕ್ಷಕರು, ಓರ್ವ ನಿರೀಕ್ಷಕರು ಮತ್ತಿತರ ಸಿಬ್ಬಂದಿ ವರ್ಗದವರಿರುತ್ತಾರೆ. ಬೆಳಗಾವಿನಲ್ಲಿರುವ ಬೆಳಗಾಂ ವಿಭಾಗದ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ಈ ಕಛೇರಿಗಳ ತಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

### ಸಾರ್ವಜನಿಕ ಗ್ರಂಥಾಲಯ ಇಲಾಖೆ

ಜಿಲ್ಲಾ ಕೇಂದ್ರ ಗ್ರಂಥಾಲಯವು ವಿಜಾಪುರದಲ್ಲಿ ೧೯೭೨ರಲ್ಲಿ ಆರಂಭವಾಗಿದ್ದು ಮುಖ್ಯ ಗ್ರಂಥಾಲಯಾಧಿಕಾರಿಗಳು ಇದರ ಮುಖ್ಯಸ್ಥರಾಗಿರುತ್ತಾರೆ. ಮುಖ್ಯ ಗ್ರಂಥಾಲಯಾಧಿಕಾರಿಗಳ ನೆರವಿಗಾಗಿ ಕಛೇರಿಯಲ್ಲಿ ಮೂವರು ಗ್ರಂಥಪಾಲಕರು,

ಓರ್ವ ಸಹ ಗ್ರಂಥಪಾಲಕರು, ೨೨ ಗ್ರಂಥಾಲಯ ಸಹಾಯಕರು, ಇಬ್ಬರು ಪ್ರಥಮ ದರ್ಜೆ ಸಹಾಯಕರು, ಇಬ್ಬರು ದ್ವಿತೀಯ ದರ್ಜೆ ಸಹಾಯಕರು, ಓರ್ವ ಬೆರಳಚ್ಚುಗಾರರು ಮತ್ತಿತರ ಸಿಬ್ಬಂದಿವರ್ಗದವರಿರುತ್ತಾರೆ. ಈ ಕಛೇರಿಯು ಜಿಲ್ಲೆಯಾದ್ಯಂತ ಹರಡಿರುವ ೧೨೦ ಗ್ರಂಥಾಲಯಗಳಿಂದ ಗ್ರಾಮೀಣ ಜನಸಾಮಾನ್ಯರಿಂದ ಬುದ್ಧಿ ಜೀವಿಗಳವರೆಗೂ ಅಧ್ಯಯನಕ್ಕೆ ಬೇಕಾಗುವ ಸಲಕರಣೆಗಳನ್ನು ಒದಗಿಸುವುದಲ್ಲದೇ ನಿರುದ್ಯೋಗಿ ಯುವಕರಿಗೆ ವೃತ್ತಿ ಮಾರ್ಗದರ್ಶನ ಒದಗಿಸುವಂತಹ ಕಾರ್ಯ ಚಟುವಟಿಕೆಗಳನ್ನು ಹೊಂದಿರುತ್ತದೆ.

ನಗರ ಕೇಂದ್ರ ಗ್ರಂಥಾಲಯವು ವಿಜಾಪುರದಲ್ಲಿ ೧೯೮೦ರಲ್ಲಿ ಆರಂಭವಾಗಿದ್ದು ಮುಖ್ಯ ಗ್ರಂಥಾಲಯಾಧಿಕಾರಿಗಳು ಇದರ ಮುಖ್ಯಸ್ಥರಾಗಿರುತ್ತಾರೆ. ನಗರದ ವಿವಿಧ ಬಡಾವಣೆಗಳಲ್ಲಿ ಗ್ರಂಥಾಲಯ ಸೇವೆಯನ್ನು ನೀಡುವುದು ಇದರ ಮುಖ್ಯ ಉದ್ದೇಶವಾಗಿದೆ. ಮುಖ್ಯ ಗ್ರಂಥಲಯಾಧಿಕಾರಿಗಳ ಸಹಾಯಕ್ಕಾಗಿ ಇಬ್ಬರು ಗ್ರಂಥಪಾಲಕರು, ಇಬ್ಬರು ಸಹ ಗ್ರಂಥಪಾಲಕರು, ಓರ್ವ ಪ್ರಥಮ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿವರ್ಗದವರೂ ಸೇರಿದಂತೆ ಒಟ್ಟಾರೆ ೨೦ ನೌಕರರಿರುತ್ತಾರೆ. ಈ ಕಛೇರಿಯ ಅಧೀನದಲ್ಲಿ ಆರು ಶಾಖಾ ಗ್ರಂಥಾಲಯಗಳು, ಒಂದು ಮಕ್ಕಳ ಗ್ರಂಥಾಲಯ ಹಾಗೂ ಒಂದು ಸಂಚಾರಿ ಗ್ರಂಥಾಲಯವೂ ಇದ್ದು ಸಂಚಾರಿ ಗ್ರಂಥಾಲಯವು ೫೨ ಸ್ಥಳಗಳಲ್ಲಿ ಗ್ರಂಥಾಲಯ ಸೇವೆಯನ್ನು ನೀಡುತ್ತಿದೆ. ಜಿಲ್ಲಾ ಮತ್ತು ನಗರ ಕೇಂದ್ರ ಗ್ರಂಥಾಲಯಗಳು, ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ ಬೆಂಗಳೂರು ಇವರ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿವೆ. (ವಿವರಗಳಿಗೆ ಅದ್ಯಾಯ ೧೩ ನ್ನು ನೋಡಿರಿ).

**ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ**

ವಿಜಾಪುರದಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳ ಕಛೇರಿಯು ೧೯೭೭ರಲ್ಲಿ ಪ್ರಾರಂಭವಾಗಿದ್ದು ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು ಇದರ ಮುಖ್ಯಸ್ಥರಾಗಿರುತ್ತಾರೆ. ಈ ಕಛೇರಿಯು ಆರಂಭವಾಗುವುದಕ್ಕೆ ಮೊದಲು ಸಮಾಜ ಕಲ್ಯಾಣ ಇಲಾಖೆಗೆ ಇದರ ಅಧಿಕಾರ ವ್ಯಾಪ್ತಿ ಒಳಪಟ್ಟಿತ್ತು. ವಿದ್ಯಾರ್ಥಿ ನಿಲಯಗಳ ನಿರ್ವಹಣೆ, ಆಶ್ರಮ ಶಾಲೆಗಳ ನಿರ್ವಹಣೆ, ಮಹಿಳಾ ಕಲ್ಯಾಣ ಕೇಂದ್ರಗಳ ನಿರ್ವಹಣೆ, ವಿದ್ಯಾರ್ಥಿ ವೇತನವನ್ನು ನೀಡುವುದು, ಶೈಕ್ಷಣಿಕ ಉತ್ತೇಜನವನ್ನು ನೀಡುವ ವಿವಿಧ ಕಾರ್ಯಕ್ರಮಗಳನ್ನು ಜಾರಿಗೆ ತರುವುದು ಇವೇ ಮೊದಲಾದುವು ಈ ಕಛೇರಿಯ ಪ್ರಮುಖ ಜವಾಬ್ದಾರಿಯಾಗಿರುತ್ತದೆ. ಕಛೇರಿಯ ಮುಖ್ಯಸ್ಥರ ನೆರವಿಗಾಗಿ ಕಛೇರಿ ಮೇಲ್ವಿಚಾರಕರು, ಹಿಂದುಳಿದ ವರ್ಗಗಳ ಪರಿವೀಕ್ಷಕರು, ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರು, ಪ್ರಥಮ ಧರ್ಜೆ ಹಾಗೂ ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು ಮತ್ತಿತರ ಸಿಬ್ಬಂದಿವರ್ಗದವರು ಕಾರ್ಯನಿರ್ವಹಿಸುತ್ತಿರು ವರು. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಈ ಕಛೇರಿಯ ಮೇಲಾಧಿಕಾರಿಗಳಾಗಿರು ತ್ತಾರೆ. (ವಿವರಗಳಿಗೆ ೧೬ ನೇ ಅಧ್ಯಾಯವನ್ನು ನೋಡಿರಿ).

## ರಾಜ್ಯ ಸರಕಾರದ ಮಂಡಳಿಗಳು ಹಾಗೂ ನಿಗಮಗಳು

**ಕರ್ನಾಟಕ ಗೃಹ ಮಂಡಳಿ**

ಕರ್ನಾಟಕ ಗೃಹ ಮಂಡಳಿಯ ಉಪ ವಿಭಾಗವು ವಿಜಾಪುರದಲ್ಲಿ ೧೯೬೭ರಲ್ಲಿ ಆರಂಭವಾಗಿದ್ದು ಸಹಾಯಕ ಇಂಜಿನಿಯರ್ ಅವರು ಇದರ ಮುಖ್ಯಸ್ಥರಾಗಿರುತ್ತಾರೆ. ಆರಂಭದಲ್ಲಿ ಈ ಕಛೇರಿಯ ಹೆಸರು ಮೈಸೂರು ಹೌಸಿಂಗ್ ಬೋರ್ಡ್, ಉಪವಿಭಾಗ, ವಿಜಾಪುರ ಎಂದಿದ್ದು ನಂತರದಲ್ಲಿ ಇದು ಕರ್ನಾಟಕ ಗೃಹಮಂಡಳಿ, ಉಪವಿಭಾಗ, ವಿಜಾಪುರ ಎಂದು ಬದಲಾವಣೆಯಾಗಿದ್ದು, ಈಗಿನ ಮುಖ್ಯಸ್ಥರ ಪದನಾಮವು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಎಂದು

ಬದಲಾವಣೆಯಾಗಿದೆ. ಇದರ ಕಾರ್ಯವ್ಯಾಪ್ತಿಯು ಜಿಲ್ಲಾ ಮಟ್ಟದ್ದಾಗಿರುತ್ತದೆ. ಹೊಸ ಬಡಾವಣೆಗಳಲ್ಲಿ ನಿವೇಶನಗಳನ್ನು ಹಾಗೂ ಮನೆಗಳನ್ನು ನಿರ್ಮಾಣ ಮಾಡಿ ಸಾರ್ವಜನಿಕರಿಗೆ ಹಂಚಿಕೆ ಮಾಡುವುದು ಇದರ ಉದ್ದೇಶವಾಗಿದೆ. ಕಛೇರಿಯ ಮುಖ್ಯಸ್ಥರ ನೆರವಿಗಾಗಿ ಓರ್ವ ಸಹಾಯಕ ಕಂದಾಯ ಅಧಿಕಾರಿಗಳು, ಓರ್ವ ಪ್ರಥಮ ದರ್ಜೆ ಸಹಾಯಕರು, ಇಬ್ಬರು ದ್ವಿತೀಯ ದರ್ಜೆ ಸಹಾಯಕರು, ಓರ್ವ ಕಂದಾಯ ನಿರೀಕ್ಷಕರು, ನಾಲ್ವರು ಕೆಲಸದ ಮೇಲ್ವಿಚಾರಕರು ಮತ್ತಿತರರೂ ಸೇರಿದಂತೆ ಒಟ್ಟಾರೆ ೧೬ ಮಂದಿ ಸಿಬ್ಬಂದಿ ವರ್ಗದವರಿರುತ್ತಾರೆ.

### ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ

ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, ಇದರ ಶಾಖೆಯು ವಿಜಾಪುರದಲ್ಲಿ ೧೯೮೦ರಲ್ಲಿ ಆರಂಭವಾಯಿತು. ವಿಜಾಪುರ ಜಿಲ್ಲೆಯ ಚರ್ಮಕುಶಲಕರ್ಮಿಗಳಿಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಹಾಗೂ ಉತ್ಪಾದಿತ ವಸ್ತುಗಳ ಮಾರುಕಟ್ಟೆಗೆ ಸಹಾಯ ಮಾಡುವುದು ಇದರ ಪ್ರಮುಖ ಉದ್ದೇಶವಾಗಿದೆ. ಈ ಕಛೇರಿಯು ಆರಂಭವಾಗುವುದಕ್ಕೆ ಮೊದಲು ಇದರ ಕಾರ್ಯನಿರ್ವಹಣೆಯ ಜವಾಬ್ದಾರಿಯನ್ನು ಹುಬ್ಬಳ್ಳಿಯಲ್ಲಿರುವ ಇದರ ಪ್ರಾದೇಶಿಕ ಕಛೇರಿಯೂ ಹಾಗೂ ವಿಜಾಪುರ ಜಿಲ್ಲಾ ಕೈಗಾರಿಕಾ ಕೇಂದ್ರವೂ ನಿರ್ವಹಿಸುತ್ತಿತ್ತು. ಜಿಲ್ಲಾ ಸಂಯೋಜಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು ಇವರ ನೆರವಿಗಾಗಿ ಓರ್ವ ತಾಂತ್ರಿಕ ಸಹಾಯಕ, ಓರ್ವ ಉಗ್ರಾಣ ಪಾಲಕ, ಓರ್ವ ಅನುಚರರು ಹಾಗೂ ಚರ್ಮ ಹದಮಾಡುವ ಘಟಕದಲ್ಲಿ ಓರ್ವ ಯೋಜನಾ ವ್ಯವಸ್ಥಾಪಕ, ಓರ್ವ ಸಹಾಯಕ ಮತ್ತು ಓರ್ವ ಅನುಚರರೂ ಇರುವರು.

### ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ವಿಜಾಪುರದಲ್ಲಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿಗಳ ಕಾರ್ಯಾಲಯವು ೧೯೫೮ ರಲ್ಲಿ ಆರಂಭವಾಗಿದ್ದು ಆರಂಭದಲ್ಲಿ ಮುಖ್ಯಾಧಿಕಾರಿಯ ಹುದ್ದೆಯ ಪದನಾಮವು ಜಿಲ್ಲಾಧಿಕಾರಿ, ಖಾದಿ ಗ್ರಾಮೋದ್ಯೋಗ ಮಂಡಳಿ ಎಂದಿದ್ದು ೧೯೯೧ರಲ್ಲಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿ ಎಂದು ಪುನರ್‌ನಾಮಕರಣ ಮಾಡಲಾಯಿತು. ಇದರ ಕಾರ್ಯವ್ಯಾಪ್ತಿಯು ಜಿಲ್ಲಾ ಮಟ್ಟದ್ದಾಗಿರುತ್ತದೆ. ಜಿಲ್ಲೆಯಲ್ಲಿ ಖಾದಿ ಗ್ರಾಮೋದ್ಯೋಗ ಚಟುವಟಿಕೆಗಳಲ್ಲಿ ತೊಡಗಿರುವ ಸಹಕಾರಿ ಸಂಘಗಳು, ನೋಂದಾಯಿತ ಸಂಸ್ಥೆಗಳು ಮತ್ತು ವೈಯಕ್ತಿಕ ಫಲಾನುಭವಿಗಳಿಗೆ ತಾಂತ್ರಿಕ ಹಾಗೂ ಆರ್ಥಿಕ ನೆರವು ನೀಡುವುದು, ಖಾದಿ ಗ್ರಾಮೋದ್ಯೋಗ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ವಿಶೇಷ ಘಟಕ ಯೋಜನೆ, ವಿಶ್ವ ಯೋಜನೆ, ಪರಿಶಿಷ್ಟ ಬುಡಕಟ್ಟು ಜನರ ವಿಶೇಷ ಯೋಜನೆ ಇವೇ ಮೊದಲಾದ ಯೋಜನೆಗಳ ಮೂಲಕ ನಿರಂತರ ಉದ್ಯೋಗಾವಕಾಶಗಳನ್ನು ಕಲ್ಪಿಸಿ ಜನರ ಆರ್ಥಿಕ ಮಟ್ಟವನ್ನು ಸುಧಾರಿಸಲು ಶ್ರಮಿಸುವುದು ಇದರ ಮುಖ್ಯ ಕಾರ್ಯ ಚಟುವಟಿಕೆಗಳಾಗಿರುತ್ತವೆ. ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿಗಳ ನೆರವಿಗಾಗಿ ಕಛೇರಿಯಲ್ಲಿ ಓರ್ವ ಅಧೀಕ್ಷಕರು, ಓರ್ವ ಲೆಕ್ಕ ಪರಿಶೋಧಕರು ಮತ್ತು ಪರಿವೀಕ್ಷಕರು, ಮೂವರು ತಾಂತ್ರಿಕ ಮೇಲ್ವಿಚಾರಕರು, ಓರ್ವ ತಾಂತ್ರಿಕ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗದವರಿರುತ್ತಾರೆ. ಧಾರವಾಡದಲ್ಲಿರುವ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವಿಭಾಗಾಧಿಕಾರಿಗಳು ಈ ಕಛೇರಿಯ ತಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

### ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ವಿಜಾಪುರದಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ೧೯೬೮ರಲ್ಲಿ ಆರಂಭವಾಗಿದ್ದು ಆರಂಭದಲ್ಲಿ ವ್ಯವಸ್ಥಾಪಕರು ಇದರ ಮುಖ್ಯಸ್ಥರಾಗಿದ್ದು ಇದರ ಕಾರ್ಯವ್ಯಾಪ್ತಿಯು ವಿಜಾಪುರ, ಜಮಖಂಡಿ, ಇಂಡಿ, ಸಿಂದಗಿ,

ಬಸವನಬಾಗೇವಾಡಿ ಹಾಗೂ ಮುದ್ದೇಬಿಹಾಳ ತಾಲೂಕುಗಳಿಗೆ ಸೀಮಿತವಾಗಿತ್ತು. ಮೇ ೧೯೯೮ರಿಂದ ಮುಖ್ಯಸ್ಥರ ಪದನಾಮವು ಸಹಾಯಕ ಪ್ರಧಾನ ವ್ಯವಸ್ಥಾಪಕರೆಂದು ಬದಲಾಗಿ ಇದರ ಕಾರ್ಯವ್ಯಾಪ್ತಿಯು ವಿಜಾಪುರ, ಇಂಡಿ, ಸಿಂದಗಿ, ಬಸವನಬಾಗೇವಾಡಿ ಮತ್ತು ಮುದ್ದೇಬಿಹಾಳ ತಾಲೂಕುಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ವಿವಿಧ ಯೋಜನೆಗಳಡಿಯಲ್ಲಿ ಸಣ್ಣ ಕೈಗಾರಿಕೆ, ಸಾರಿಗೆ, ಹೋಟೇಲು ಉದ್ಯಮ ಇವೇ ಮೊದಲಾದ ಸ್ವಯಂ ಉದ್ಯೋಗಗಳನ್ನು ಆರಂಭಿಸಲು ಹಾಗೂ ಅಂಗವಿಕಲ ಉದ್ಯಮಿಗಳು ಮತ್ತು ಮಹಿಳಾ ಉದ್ದಿಮೆದಾರರಿಗೆ ಆರ್ಥಿಕ ನೆರವನ್ನು ನೀಡುವುದು ಈ ಸಂಸ್ಥೆಯ ಪ್ರಮುಖ ಕಾರ್ಯಚಟುವಟಿಕೆಯಾಗಿದೆ. ಸಹಾಯಕ ಪ್ರಧಾನ ವ್ಯವಸ್ಥಾಪಕರ ನೆರವಿಗಾಗಿ ಏಳು ಉಪ ವ್ಯವಸ್ಥಾಪಕರು, ಆರು ಹಿರಿಯ ಸಹಾಯಕರು, ಏಳು ಸಹಾಯಕರು, ಇಬ್ಬರು ಬೆರಳಚ್ಚುಗಾರರು, ಇಬ್ಬರು ಸೇವಕರೂ, ಮತ್ತು ಓರ್ವ ವಾಹನ ಚಾಲಕರು ಕಾರ್ಯನಿರ್ವಹಿಸುತ್ತಿರುವರು. ಇದರ ಪ್ರಧಾನ ಕಛೇರಿಯು ಬೆಂಗಳೂರಿನಲ್ಲಿದೆ.

**ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ**

ವಿಜಾಪುರದಲ್ಲಿ ಇದರ ಜಿಲ್ಲಾ ಕಛೇರಿಯು ೧೯೭೭ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು ಆರಂಭದಲ್ಲಿ ಜಿಲ್ಲಾ ಪರಿಶೀಲನಾ ಅಧಿಕಾರಿಗಳು ಇದರ ಮುಖ್ಯಸ್ಥರಾಗಿದ್ದು, ನಂತರದಲ್ಲಿ ಮುಖ್ಯಾಧಿಕಾರಿಯ ಹುದ್ದೆಯ ಪದನಾಮವನ್ನು ಯೋಜನಾಧಿಕಾರಿ ಎಂದೂ ಮತ್ತು ಇದನ್ನು ಜಿಲ್ಲಾ ವ್ಯವಸ್ಥಾಪಕರೆಂದೂ ಬದಲಾವಣೆ ಮಾಡಲಾಯಿತು. ಇದರ ಕಾರ್ಯವ್ಯಾಪ್ತಿಯು ಜಿಲ್ಲಾ ಮಟ್ಟದ್ದಾಗಿರುತ್ತದೆ. ನಿಗಮದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಆರ್ಥಿಕ ಉನ್ನತಿಗಾಗಿ ಭೂ ಒಡೆತನ ಯೋಜನೆ, ಗಂಗಾಕಲ್ಯಾಣ ಯೋಜನೆ, ಸ್ವಯಂ ಉದ್ಯೋಗ ಯೋಜನೆ, ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ ಇವೇ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ವ್ಯವಸ್ಥಾಪಕರ ನೆರವಿಗಾಗಿ ಆರು ಜನ ಅಭಿವೃದ್ಧಿ ಸಹಾಯಕರು, ನಾಲ್ಕು ಜನ ವಿವಿಧ ವಿಷಯಗಳ ವಿಷಯ ನಿರೂಪಕರು, ಓರ್ವ ಅಧೀಕ್ಷಕರು, ಓರ್ವ ಲೆಕ್ಕ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗದವರಿರುತ್ತಾರೆ. ಮುಖ್ಯ ಪ್ರಧಾನ ವ್ಯವಸ್ಥಾಪಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಈ ಕಛೇರಿಯ ಮೇಲಾಧಿಕಾರಿಗಳಾಗಿರುತ್ತಾರೆ. (ವಿವರಗಳಿಗೆ ಇತರ ಸಮಾಜ ಸೇವಾ ಸೌಲಭ್ಯಗಳು ೧೬ ನೇ ಅಧ್ಯಾಯವನ್ನು ನೋಡಿರಿ).

**ಜಿಲ್ಲಾ ಕಾನೂನು ನೆರವು ಸಮಿತಿ**

ವಿಜಾಪುರದಲ್ಲಿ ಜಿಲ್ಲಾ ಕಾನೂನು ನೆರವು ಸಮಿತಿಯು ೧೯೮೪ರಲ್ಲಿ ಆರಂಭವಾಗಿದ್ದು ೧೯೯೭ರಲ್ಲಿ ಈ ಕಛೇರಿಯ ಹೆಸರನ್ನು ಜಿಲ್ಲಾ ಕಾನೂನು ಪ್ರಾಧಿಕಾರವೆಂದು ಬದಲಾವಣೆ ಮಾಡಲಾಯಿತು. ಬಾಗಲಕೋಟೆ ಜಿಲ್ಲೆಯಾದ ನಂತರ (೧೯೯೭) ಇದರ ಕಾರ್ಯವ್ಯಾಪ್ತಿಯು ವಿಜಾಪುರ, ಇಂಡಿ, ಸಿಂದಗಿ, ಬಸವನಬಾಗೇವಾಡಿ ಹಾಗೂ ಮುದ್ದೇಬಿಹಾಳ ತಾಲೂಕುಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಅಧ್ಯಕ್ಷರು ಇದರ ಮುಖ್ಯಸ್ಥರಾಗಿದ್ದು ತಾಲೂಕು ಮಟ್ಟದಲ್ಲಿ ಕಾರ್ಯದರ್ಶಿಗಳು ತಾಲೂಕು ಕಾನೂನು ಸಮಿತಿಯ ಮುಖ್ಯಸ್ಥರಾಗಿರುತ್ತಾರೆ. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ 'ಕಾಂಪೆಂಡಿಯಮ್' ಪ್ರಕಾರ ಪರಿಶಿಷ್ಟಜಾತಿ, ಪರಿಶಿಷ್ಟಪಂಗಡದವರಿಗೆ, ಮಹಿಳೆಯರಿಗೆ, ದುರ್ಬಲವರ್ಗ ದವರಿಗೆ ಮತ್ತು ೧೮,೦೦೦ ರೂಪಾಯಿ ವಾರ್ಷಿಕ ವರಮಾನ ಮೀರದ ಎಲ್ಲ ವರ್ಗದ ಜನರಿಗೆ ಕಾನೂನು ನೆರವನ್ನು ಉಚಿತವಾಗಿ ನೀಡುವುದು, ಲೋಕ ಅದಾಲತ್‌ಗಳನ್ನು ಏರ್ಪಡಿಸುವುದು ಹಾಗೂ ವಿದ್ಯಾ ಪ್ರಸಾರದ ಯೋಜನೆಯಡಿಯಲ್ಲಿ

ಹಳ್ಳಿಗಳಲ್ಲಿ ಶಿಬಿರಗಳನ್ನು ಏರ್ಪಡಿಸುವುದು ಇದರ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ. ಬೆಂಗಳೂರಿನಲ್ಲಿರುವ ಕರ್ನಾಟಕ ಸರಕಾರ ಕಾನೂನು ನೆರವು ಪ್ರಾಧಿಕಾರದ ಕಾರ್ಯದರ್ಶಿಗಳು ಈ ಕಛೇರಿಯ ಮೇಲಾಧಿಕಾರಿಗಳಾಗಿರುತ್ತಾರೆ.

## ಜಿಲ್ಲಾ ಗ್ರಾಹಕರ ದೂರು ಪರಿಹಾರ ವೇದಿಕೆ

ವಿಜಾಪುರದಲ್ಲಿ ಜಿಲ್ಲಾ ಗ್ರಾಹಕರ ದೂರು ಪರಿಹಾರ ವೇದಿಕೆಯು ೧೯೯೧ರಲ್ಲಿ ಪ್ರಾರಂಭವಾಗಿದ್ದು ಇದು ಗ್ರಾಹಕರ ಹಿತರಕ್ಷಣಾ ಕಾಯ್ದೆ ೧೯೮೭ರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದರ ಕಾರ್ಯವ್ಯಾಪ್ತಿಯು ವಿಜಾಪುರ ಜಿಲ್ಲೆಗೆ ಸೀಮಿತವಾಗಿದ್ದು, ಜಿಲ್ಲೆಯಲ್ಲಿ ಗ್ರಾಹಕರು ದೂರುಗಳ ಪರಿಹಾರ ಕೋರಿ ಬಂದಂತಹ ಅರ್ಜಿಗಳನ್ನು ವಿಚಾರಣೆ ಮಾಡಿ ತೀರ್ಪು ನೀಡುವುದು ಇದರ ಜವಾಬ್ದಾರಿಯಾಗಿರುತ್ತದೆ. ಅಧ್ಯಕ್ಷರು ಇದರ ಮುಖ್ಯಸ್ಥರಾಗಿದ್ದು ಇವರ ನೆರವಿಗಾಗಿ ಓರ್ವ ಸಹಾಯಕ ನಿಬಂಧಕರು, ಓರ್ವ ಶಿರಸ್ತೇದಾರರು, ಇಬ್ಬರು ಶೀಘ್ರಲಿಪಿಗಾರರು, ಓರ್ವ ಪ್ರಥಮ ದರ್ಜೆ ಸಹಾಯಕರು, ಓರ್ವ ದ್ವಿತೀಯ ದರ್ಜೆ ಸಹಾಯಕರು, ಓರ್ವ ವಾಹನ ಚಾಲಕರು ಹಾಗೂ ಮೂವರು 'ಡಿ'ವರ್ಗದ ನೌಕರರೂ ಇರುತ್ತಾರೆ. ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಗ್ರಾಹಕರ ದೂರು ಪರಿಹಾರ ಆಯೋಗದ ಅಧ್ಯಕ್ಷರು ಇವರ ಮೇಲಾಧಿಕಾರಿಗಳಾಗಿರುತ್ತಾರೆ.

# ಕೇಂದ್ರ ಸರಕಾರದ ಕಛೇರಿಗಳು

## ಅಬಕಾರಿ ಇಲಾಖೆ

ತಯಾರಿಸಿದ ವಸ್ತುಗಳ ಮೇಲಿನ ಅಬಕಾರಿ (ಎಕ್ಸೈಜ್), ಸುಂಕದ ವಸೂಲಿ ಹಾಗೂ ಕಳ್ಳಸಾಗಾಣಿಕೆಯ ಮೇಲಿನ ನಿಯಂತ್ರಣ ಸಾಧಿಸುವ ಉದ್ದೇಶದಿಂದ ಕೇಂದ್ರ ಅಬಕಾರಿ ಕಛೇರಿಯು ವಿಜಾಪುರದಲ್ಲಿದ್ದು ೧೯೭೧ರವರೆವಿಗೆ ಇದು ಒಂದು ವಲಯ ಕಛೇರಿಯಾಗಿತ್ತು. ನಂತರ ೧೯೭೧ರಿಂದ ೭೪ರವರೆವಿಗೆ ಇದು ನಿರೀಕ್ಷಣಾಧಿಕಾರಿಗಳುಳ್ಳ ಒಂದು ಅರ್ಗವರ್ತಿ ಕ್ಷೇತ್ರವಾಗಿದ್ದು ೧೯೭೫ರಲ್ಲಿ ರೇಂಜ್ ಆಫೀಸ್ ಆಗಿ ಬದಲಾವಣೆ ಆಯಿತು. ಈ ಕಚೇರಿಯು ಜನವರಿ ೧೯೮೭ರಿಂದ ವಿಜಾಪುರ ಮತ್ತು ಬಾಗಲಕೋಟೆಯ ಎರಡು ಪ್ರತ್ಯೇಕ ರೇಂಜ್ ಕಛೇರಿಗಳಾದವು. ವಿಜಾಪುರ, ಜಮಖಂಡಿ, ಮುಧೋಳ, ಮುದ್ದೇಬಿಹಾಳ, ಸಿಂದಗಿ, ಇಂಡಿ ಮತ್ತು ಬಸವನಬಾಗೇವಾಡಿ ತಾಲೂಕುಗಳು ವಿಜಾಪುರ ರೇಂಜ್ ಕಚೇರಿಯ ವ್ಯಾಪ್ತಿಗೂ ಮತ್ತು ಬಾಗಲಕೋಟೆ, ಬಾದಾಮಿ, ಹುನಗುಂದ ಮತ್ತು ಬೀಳಗಿ ತಾಲೂಕುಗಳು ಬಾಗಲಕೋಟೆ ರೇಂಜ್ ಕಚೇರಿಯ ವ್ಯಾಪ್ತಿಗೂ ಒಳಪಟ್ಟಿದೆ. ವಿಜಾಪುರ ರೇಂಜ್ ಕಚೇರಿಯಲ್ಲಿ ಒಬ್ಬ ಅಧೀಕ್ಷಕರೂ, ಮೂವರು ನಿರೀಕ್ಷಣಾಧಿಕಾರಿಗಳೂ ಮತ್ತು ನಾಲ್ವರು ಸಿಪಾಯಿಗಳೂ ಇದ್ದು ಬಾಗಲಕೋಟೆ ರೇಂಜ್ ಕಚೇರಿಯಲ್ಲಿ ಒಬ್ಬ ಅಧೀಕ್ಷಕರೂ, ಮೂವರು ನಿರೀಕ್ಷಣಾಧಿಕಾರಿಗಳೂ ಮತ್ತು ಇಬ್ಬರು ಸಿಪಾಯಿಗಳೂ ಇರುವರು. ವಿಜಾಪುರ ರೇಂಜ್ ಕಚೇರಿಯ ಅಧೀನದಲ್ಲಿ ಒಂದು ಅರ್ಗವರ್ತಿ ಕ್ಷೇತ್ರವು ಜಮಖಂಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ನಿರೀಕ್ಷಣಾಧಿಕಾರಿಗಳು ಇದರ ಮುಖ್ಯಸ್ಥರಾಗಿರುತ್ತಾರೆ. ಕೇಂದ್ರ ಅಬಕಾರಿ ಮತ್ತು ಉಪ್ಪಿನ ಕಾಯ್ದೆ ೧೯೪೪, ಕಸ್ಟಮ್ಸ್ ಆ್ಯಕ್ಟ್ ೧೯೬೨, ಆಮದು ಮತ್ತು ರಫ್ತಿನ ವಿವಿಧ ಕಾಯ್ದೆಗಳು ಹಾಗೂ ಇವುಗಳಡಿಯಲ್ಲಿ ಬರುವ ನಿಯಮಗಳನ್ನು ಜಾರಿಗೆ ತರುವುದು ಈ ಇಲಾಖೆಯ ಪ್ರಮುಖ ಜವಾಬ್ದಾರಿಯಾಗಿರುತ್ತದೆ. ಹುಬ್ಬಳ್ಳಿಯಲ್ಲಿರುವ ಧಾರವಾಡ ವಿಭಾಗದ ಸುಂಕ ಮತ್ತು ಅಬಕಾರಿ ಇಲಾಖೆಯ ಸಹಾಯಕ ಆಯುಕ್ತರು ಈ ಕಛೇರಿಯ ತಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

**ಆಕಾಶವಾಣಿ ಕೇಂದ್ರ**

ವಿಜಾಪುರದಲ್ಲಿ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಗಾಗಿ ಮತ್ತು ಮನರಂಜನೆಯನ್ನು ಒದಗಿಸುವ ಉದ್ದೇಶದಿಂದ ಆಕಾಶವಾಣಿ ಕೇಂದ್ರವು ೧೯೭ರಲ್ಲಿ ಆರಂಭವಾಯಿತು. ಆಕಾಶವಾಣಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ. ಸ್ಟೇಷನ್ ಇಂಜಿನಿಯರ್ ಉಸ್ತುವಾರಿಯಲ್ಲಿ ಇದು ಕಾರ್ಯನಿರ್ವಹಿಸುತ್ತಿದ್ದು ಇದರ ನೆರವಿಗಾಗಿ ಸಹಾಯಕ ಸ್ಟೇಷನ್ ಇಂಜಿನಿಯರ್, ಕಾರ್ಯಕ್ರಮ ನಿರ್ವಾಹಕರು, ಲೆಕ್ಕಿಗರು, ತಂತ್ರಜ್ಞರು ಮತ್ತಿತರ ಸಿಬ್ಬಂದಿ ವರ್ಗದವರಿರುತ್ತಾರೆ. ನವದೆಹಲಿಯಲ್ಲಿರುವ ಆಕಾಶವಾಣಿಯ ಡೈರೆಕ್ಟರ್ ಜನರಲ್ ಈ ಕೇಂದ್ರದ ಮೇಲಾಧಿಕಾರಿಗಳಾಗಿರುತ್ತಾರೆ.

**ಜಿಲ್ಲಾ ದೂರ ಸಂಪರ್ಕ ವ್ಯವಸ್ಥಾಪಕರ ಕಛೇರಿ**

ವಿಜಾಪುರದಲ್ಲಿ ಜಿಲ್ಲಾ ದೂರಸಂಪರ್ಕ ವ್ಯವಸ್ಥಾಪಕರ ಕಛೇರಿಯು ಕಾರ್ಯನಿರ್ವಹಿಸುತ್ತಿದ್ದು ಇದರ ಅಧೀನದಲ್ಲಿ ವಿಜಾಪುರ, ಸಿಂದಗಿ, ಬಾಗಲಕೋಟೆ, ಹುನಗುಂದ, ಬೀಳಗಿ, ಇಂಡಿ, ಬಾದಾಮಿ, ಜಮಖಂಡಿ, ಮುದ್ದೇಬಿಹಾಳ, ಬಸವನ ಬಾಗೇವಾಡಿ, ಮುಧೋಳ ಇವುಗಳನ್ನೊಳಗೊಂಡಂತೆ ಹಾಗೂ ಕೇಬಲ್ ತಂತಿ ಲೇಖನ (ಟೆಲಿಗ್ರಾಫ್ಸ್) , ದೂರವಾಣಿ ಇವೇ ಮೊದಲಾದ ವಿವಿಧ ಶಾಖೆಗಳೂ ಸೇರಿದಂತೆ ಒಟ್ಟಾರೆ ೨೩ ಉಪ ವಿಭಾಗೀಯ ಅಭಿಯಂತರರ ಕಛೇರಿಗಳೂ ಮತ್ತು ೫ ಉಪ ವಿಭಾಗೀಯ ಅಧಿಕಾರಿಗಳ ಕಛೇರಿಯೂ ಕಾರ್ಯನಿರ್ವಹಿಸುತ್ತಿದ್ದು ಒಟ್ಟಾರೆ ನಾಲ್ಕು ಗ್ರೂಪ್ 'ಎ' ವರ್ಗದವರೂ, ೩೨ ಗ್ರೂಪ್ 'ಬಿ' ವರ್ಗದವರೂ, ೭೦೨ ಗ್ರೂಪ್ 'ಸಿ' ವರ್ಗದವರೂ ಮತ್ತು ೨೪೧ ಗ್ರೂಪ್ 'ಡಿ' ವರ್ಗದ ಸಿಬ್ಬಂದಿಗಳೂ ಇರುತ್ತಾರೆ. ದೂರ ಸಂಪರ್ಕ ಜಾಲದ ಪ್ರತಿಷ್ಠಾಪನೆ, ಸಂರಕ್ಷಣೆ ಮತ್ತು ಆಡಳಿತವು ಇದರ ಪ್ರಮುಖ ಉದ್ದೇಶವಾಗಿರುತ್ತದೆ.

**ದೂರದರ್ಶನ ಕೇಂದ್ರ**

ವಿಜಾಪುರದಲ್ಲಿ ದೂರದರ್ಶನ ಪ್ರಸಾರ ಕೇಂದ್ರವು ೧೯೮೪ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಸಹಾಯಕ ಅಭಿಯಂತರರು ಇದರ ಮುಖ್ಯಸ್ಥರಾಗಿರುತ್ತಾರೆ. ರಾಷ್ಟ್ರೀಯ ಹಾಗೂ ಪ್ರಾದೇಶಿಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದು ಇದರ ಜವಾಬ್ದಾರಿಯಾಗಿರುತ್ತದೆ. ಸಹಾಯಕ ಅಭಿಯಂತರರ ನೆರವಿಗಾಗಿ ಒಬ್ಬ ಹಿರಿಯ ಇಂಜಿನಿಯರಿಂಗ್ ಸಹಾಯಕರು, ಮೂವರು ಇಂಜಿನಿಯರಿಂಗ್ ಸಹಾಯಕರು, ಒಬ್ಬ ಹಿರಿಯ ತಂತ್ರಜ್ಞರು, ಮೂವರು ತಂತ್ರಜ್ಞರು ಹಾಗೂ ಮತ್ತಿತರ ಸಿಬ್ಬಂದಿ ವರ್ಗದವರು ಈ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವರು. ಗುಲ್ಬರ್ಗದಲ್ಲಿರುವ ದೂರದರ್ಶನ ನಿರ್ವಹಣಾ ಕೇಂದ್ರದ ಸ್ಟೇಷನ್ ಇಂಜಿನಿಯರ್ ಈ ಕೇಂದ್ರದ ತಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

**ಪ್ರಾಚ್ಯವಸ್ತು ಸಂಗ್ರಹಾಲಯ**

ವಿಜಾಪುರದಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯದ ಕಚೇರಿಯು ೧೯೬೨ರಲ್ಲಿ ಆರಂಭವಾಗಿದ್ದು ಆರಂಭದಲ್ಲಿ ಪರಿಪಾಲಕರು (ಕ್ಯೂರೇಟರ್)ಇದರ ಮುಖ್ಯಸ್ಥರಾಗಿದ್ದರು. ಈ ಹುದ್ದೆಯ ಪದನಾಮವನ್ನು ೧೯೮೦ರಲ್ಲಿ ಪುರಾತತ್ವ ಸಹಾಯಕ ಅಧೀಕ್ಷಕರಾಗಿ ಬದಲಾವಣೆ ಮಾಡಲಾಯಿತು. ಇವರ ನೆರವಿಗಾಗಿ ಸಂಗ್ರಹಾಲಯದಲ್ಲಿ ಓರ್ವ ದ್ವಿತೀಯ ದರ್ಜೆ ಸಹಾಯಕರು, ನಾಲ್ವರು ಸಂಗ್ರಹಾಲಯದ ಅನುಚರರು, ಇಬ್ಬರು ಅನುಚರರೂ ಹಾಗೂ ನಾಲ್ಕು ಚೌಕಿದಾರರೂ ಕಾರ್ಯನಿರ್ವಹಿಸುತ್ತಿರುವರು. ಬಾದಾಮಿಚಾಲುಕ್ಯರ ಕಾಲದಿಂದ ಆದಿಲ್‌ಷಾಹಿ ಕಾಲದವರೆಗಿನ ವಸ್ತು ಸಂಗ್ರಹಾಲಯದಲ್ಲಿರುವ ಪ್ರಾಚ್ಯವಸ್ತುಗಳ ಸಂರಕ್ಷಣೆ, ರಕ್ಷಣೆ ಮತ್ತು ವಸ್ತುಸಂಗ್ರಹಾಲಯದ ದಿನನಿತ್ಯದ ಉಸ್ತುವಾರಿಯು ಇದರ ಪ್ರಮುಖ

ಕಾರ್ಯಚಟುವಟಿಕೆಗಳಾಗಿವೆ. ಅಲ್ಲದೆ ಗಣ್ಯ ವ್ಯಕ್ತಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಸಂಗ್ರಹಾಲಯದಲ್ಲಿರುವ ವಿವಿಧ ಪ್ರಾಚ್ಯವಸ್ತುಗಳ ಬಗೆಗೆ ಮತ್ತು ಪ್ರದೇಶದ ಇತಿಹಾಸದ ಬಗೆಗೆ ಮಾಹಿತಿಯನ್ನು ನೀಡಲಾಗುವುದು. ಪುರಾತತ್ವ ಅಧೀಕ್ಷಕರು, ಕೇಂದ್ರ ಪುರಾತತ್ವ ಸರ್ವೇಕ್ಷಣಾಲಯ ಧಾರವಾಡ ವೃತ್ತ ಇವರು ಈ ಸಂಗ್ರಹಾಲಯದ ತಕ್ಷಣದ ಮೇಲಾಧಿಕಾರಿ ಗಳಾಗಿರುತ್ತಾರೆ.

### ಭಾರತ ಸರ್ಕಾರದ ಕ್ಷೇತ್ರ ಪ್ರಚಾರ ನಿರ್ದೇಶನಾಲಯ

ವಿಜಾಪುರದಲ್ಲಿ ಭಾರತ ಸರಕಾರದ ವಾರ್ತಾ ಪ್ರಚಾರ ನಿರ್ದೇಶನಾಲಯ ಇದರ ನಿಯಂತ್ರಣದಲ್ಲಿ ಕ್ಷೇತ್ರ ಪ್ರಚಾರ ಕಛೇರಿಯು ೧೯೭೪ರಿಂದ ಕಾರ್ಯನಿರ್ವಹಿಸುತ್ತಿದ್ದು ಕ್ಷೇತ್ರ ಪ್ರಚಾರ ಅಧಿಕಾರಿಯು ಇದರ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲೆಯಾದ್ಯಂತ ಪ್ರಚಾರ ಕಾರ್ಯಕ್ರಮ ಏರ್ಪಡಿಸುವುದು, ಕೇಂದ್ರ ಸರಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಸಾಕ್ಷ್ಯಚಿತ್ರ, ಚರ್ಚೆ, ವಿವಿಧ ಸ್ಪರ್ಧೆ, ವಿಚಾರ ಸಂಕಿರಣ ಹಾಗೂ ಮುಖಾಮುಖಿ ಸಂದರ್ಶನ ಮುಖಾಂತರ ಪ್ರಚಾರ ಕಾರ್ಯಕ್ರಮ ಕೈಗೊಳ್ಳುವುದು ಈ ಕಛೇರಿಯ ಪ್ರಮುಖ ಕಾರ್ಯಗಳಾಗಿವೆ. ಕಛೇರಿಯಲ್ಲಿ ಕ್ಷೇತ್ರ ಪ್ರಚಾರ ಅಧಿಕಾರಿಗಳ ನೆರವಿಗಾಗಿ ಓರ್ವ ಕ್ಷೇತ್ರ ವಿಚಾರ ಸಹಾಯಕ, ಓರ್ವ ದ್ವಿತೀಯ ದರ್ಜೆ ಸಹಾಯಕ, ವಾಹನ ಚಾಲಕ ಮತ್ತಿತರ ಸಿಬ್ಬಂದಿ ವರ್ಗದವರಿರುತ್ತಾರೆ. ಬೆಂಗಳೂರಿನಲ್ಲಿರುವ ಕ್ಷೇತ್ರ ಪ್ರಚಾರ ನಿರ್ದೇಶನಾಲಯದ ಜಂಟಿ ನಿರ್ದೇಶಕರು ಈ ಕಛೇರಿಯ ಮೇಲಾಧಿಕಾರಿಗಳಾಗಿರುತ್ತಾರೆ.

* * *